# Current affairs of May 2020 from KPSC Vaani



# Current affairs of May 2020 from KPSC Vaani

### * 01 05 2020 ನರೆಗಾ ಕೂಲಿ ಬೇಡಿಕೆ ಸರಳೀಕರಣಕ್ಕಾಗಿ 'ಕಾಯಕ ಮಿತ್ರ' ಆಯಪ್ ಬಿಡುಗಡೆ



ಬೆಂಗಳೂರು : ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ನಡೆಯುವ ಕೂಲಿ ಕೆಲಸದ ಬೇಡಿಕೆಯನ್ನು ಸುಲಭಗೊಳಿಸಲು ರಾಜ್ಯ ಸರ್ಕಾರದಿಂದ 'ಕಾಯಕ ಮಿತ್ರ' ಆಯಪ್ ಅನ್ನು ಬಿಡುಗಡೆ ಮಾಡಲಾಗಿದೆ.

* ಈ ಆಯಪ್ ಮೂಲಕ ಕೂಲಿ ಬೇಡಿಕೆ ಸಲ್ಲಿಸಲು ಲಾಗಿನ್ ನೋಂದಣಿಯ ಅವಶ್ಯಕತೆ ಇರುವದಿಲ್ಲ. ಸುಮಾರು 15 ದಿನಗಳ ವರೆಗೆ ಕೂಲಿ ಮನವಿ ಸಲ್ಲಿಸಬಹುದು.
* ಉದ್ಯೋಗ ಚೀಟಿ ಹೊಂದಿರಬೇಕು.
* ಕೃಷಿ ಹೊಂಡ, ಬದು ನಿರ್ಮಾಣ, ತೋಟಗಾರಿಕೆ, ರೇಷ್ಮೆ, ಕೃಷಿ, ಅರಣ್ಯ, ಎರೆಹುಳು ಗೊಬ್ಬರ ತೊಟ್ಟಿ ನಿರ್ಮಾಣಕ್ಕೆ ಸೇರಿ ವಿವಿಧ ಕೃಷಿ ಬೇಡಿಕೆ ಸಲ್ಲಿಸಲು ಅವಕಾಶ ನೀಡಲಾಗಿದೆ.

### * 01 05 2020 ಏಷ್ಯಾ / ಓಷಿಯಾನಿಯಾ ವಲಯದಿಂದ ಫೆಡ್ ಕಪ್ ಹಾರ್ಟ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಸಾನಿಯಾ ಮಿರ್ಜಾ




ನವದೆಹಲಿ: ಭಾರತೀಯ ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರು ಏಷ್ಯಾ /ಓಷಿಯಾನಿಯಾ ವಲಯದಿಂದ ಫೆಡ್ ಕಪ್ ಹಾರ್ಟ್ ಪ್ರಶಸ್ತಿಗೆ ನಾಮನಿರ್ದೇಶನಗೊಳ್ಳುವ ಮೂಲಕ ಈ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಮೊದಲ ಭಾರತೀಯೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಸಾನಿಯಾ ಅವರೊಂದಿಗೆ ಇಂಡೋನೇಷ್ಯಾದ ಟೆನಿಸ್ ಆಟಗಾರ್ತಿ ಪ್ರಿಸ್ಕಾ ಮೆಡೆಲ್ ಎನ್ ನುಗ್ರೋರೊ ಕೂಡ ನಾಮ ನಿರ್ದೇಶನಗೊಂಡಿದ್ದಾರೆ.

# Current affairs of May 2020 from KPSC Vaani

*** 01 05 2020 ಕುವೈತ್‌ಗೆಭಾರತದನೂತನರಾಯಭಾರಿಯಾಗಿಸಿಬಿಜಾರ್ಜ್**



ಹೊಸದಿಲ್ಲಿ : 1993ರ ಸಾಲಿನ ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿಯಾಗಿದ್ದ ಸಿಬಿ ಜಾರ್ಜ್ ಅವರು ಕುವೈತ್‌ಗೆ ಭಾರತದ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಈ ಮೊದಲು ಇವರು ಕೈರೋ, ದೋಹಾ, ಇಸ್ಲಾಮಾಬಾದ್, ಟೆಹರಾನ್, ರಿಯಾದ್, ಸ್ವಿಟ್ಜರ್ ಲ್ಯಾಂಡ್ ಹಾಗೂ ವಾಶಿಂಗ್ಟನ್ ಸೇರಿದಂತೆ ವಿಶ್ವದ ವಿವಿಧ ದೇಶದಗಳ ರಾಜದಾನಿಗಳಲ್ಲಿರುವ ಭಾರತೀಯ ರಾಯಭಾರಿ ಕಚೇರಿಗಳಲ್ಲಿ ತಮ್ಮ ಸೇವೆ ಸಲ್ಲಿಸಿದ್ದಾರೆ. ಮೂಲತಃ ಕೇರಳದ ಕೊಟ್ಟಾಯಂ ಜಿಲ್ಲೆಯವರಾದ ಸಿಬಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣಗಳಲ್ಲಿ ಚಿನ್ನದ ಪದಕ ವಿಜೇತರು. ಅರೇಬಿಕ್ ಭಾಷೆಯಲ್ಲಿಯೂ ಅವರು ಡಿಪ್ಲೊಮಾ ಪಡೆದಿದ್ದಾರೆ.

*** 01 05 2020 ಭಾರತದಫುಟ್ಬಾಲ್‌ದಿಗ್ಗಜಚುನಿಗೋಸ್ವಾಮಿವಿಧಿವಶ**



ಹೊಸದಿಲ್ಲಿ : ಭಾರತದ ಫುಟ್ಬಾಲ್ ದಂತಕತೆಯಾದ ದಿಗ್ಗಜ ಚುನಿ ಗೋಸ್ವಾಮಿ ಅವರು ತಮ್ಮ 82 ವಯಸ್ಸಿನಲ್ಲಿ ದಿನಾಂಕ 30 ಏಪ್ರಿಲ್ 2020 ರಂದು ವಿಧಿವಶರಾದರು, ಇವರು 1962ರ ಏಶ್ಯನ್ ಗೇಮ್ಸ್ ನಲ್ಲಿ ಭಾರತ ತಂಡವನ್ನು ನಾಯಕನಾಗಿ ಮುನ್ನಡೆಸಿ ಚಿನ್ನದ ಪದಕ ವಿಜೇತರಾಗಿದ್ದರು.

* ಫುಟ್ಬಾಲ್ ಆಟಗಾರನಾಗಿ ಭಾರತದ ಪರ ಗೋಸ್ವಾಮಿ 1956 ರಿಂದ 1964ರ ತನಕ ಸುಮಾರು 50 ಪಂದ್ಯಗಳಲ್ಲಿ ಭಾಗವಹಿಸಿದ್ದರು ಅಲ್ಲದೆ ಕ್ರಿಕೆಟಿಗನಾಗಿ ಬಂಗಾಳ ತಂಡವನ್ನು 1962 ರಿಂದ 1973ರ ತನಕ 46 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದರು.

# Current affairs of May 2020 from KPSC Vaani

### * 01 05 2020 100 ಜಾಗತಿಕ ಶ್ರೇಷ್ಠ ವಿವಿಗಳಲ್ಲಿ ಸ್ಥಾನ ಪಡೆದ ಬೆಂಗಳೂರಿನ IISC



ನವದೆಹಲಿ: ಜಾಗತಿಕ ರೌಂಡ್ ಯೂನಿವರ್ಸಿಟಿ ರ್ಯಾಂಕಿಂಗ್ ಬಿಡುಗಡೆಗೊಂಡಿದ್ದು ಈ ರ್ಯಾಂಕಿಂಗ್ ಪಟ್ಟಿಯಲ್ಲಿಬೆಂಗಳೂರಿನಭಾರತೀಯವಿಜ್ಞಾನಸಂಸ್ಥೆ(IIS C) ಯು ಟಾಪ್ 100 ಅಥವಾ ಡೈಮಂಡ್ ಲೀಗ್‌ನಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯ ವಿಶ್ವ ವಿದ್ಯಾಲಯವಾಗಿದೆ. * 2019 ರಲ್ಲಿ 84ನೇ ಸ್ಥಾನದಲ್ಲಿದ್ದ IISC ಯು ಈ ಬಾರಿ 62ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

* ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ದೆಹಲಿ 249 ಸ್ಥಾನ ಗಳಿಸಿದೆ.
* ಐಐಟಿ ಮದ್ರಾಸ್ 271 ಮತ್ತು ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ 287 ನೇ ಸ್ಥಾನದಲ್ಲಿದೆ.
* ಜಾಗತಿಕ ಮಟ್ಟದಲ್ಲಿ ಯುಎಸ್‌ಎ ಹಾರ್ವರ್ಡ್ ವಿಶ್ವವಿದ್ಯಾಲಯ ಅಗ್ರಸ್ಥಾನದಲ್ಲಿದೆ.
* ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕ್ಯಾಲ್ಟೆಕ್) ಎರಡೇ ಸ್ಥಾನದಲ್ಲಿದೆ.

### * 01 05 2020 ರಾಮಾಯಣ ಧಾರಾವಾಹಿಗೆ ಜಾಗತಿಕವಾಗಿ ಅತಿ ಹೆಚ್ಚು ವೀಕ್ಷಿಸಲ್ಪಟ್ಟ ಮನೋರಂಜನಾಕಾರ್ಯಕ್ರಮಎಂಬವಿಶ್ವದಾಖಲೆ



ನವದೆಹಲಿ : ರಮಾನಂದ ಸಾಗರ್ ಅವರು ನಿರ್ದೇಶಿಸಿರುವ ಸುಪ್ರಸಿದ್ಧ ದಾರಾವಾಹಿಯಾದ ರಾಮಾಯಣವು ಜಗತ್ತಿನ ದೂರದರ್ಶನ ಕ್ಷೇತ್ರದಲ್ಲೇ ಹೆಚ್ಚು TRP ಪಡೆಯುವ ಮೂಲಕ ಹೊಸ ದಾಖಲೆ ಸೃಷ್ಟಿಮಾಡಿದೆ. ದಿನಾಂಕ ಏಪ್ರಿಲ್16, 2020 ರಂದು ಒಟ್ಟು 7.7 ಕೋಟಿ ವೀಕ್ಷಕರು ಈ ಕಾರ್ಯಕ್ರಮ ವೀಕ್ಷಿಸುವ ಮೂಲಕ ಹೊಸ ವಿಶ್ವದಾಖಲೆ ಮಾಡಿದೆ ಎಂದು ದೂರದರ್ಶನ ತನ್ನ ಅಧಿಕೃತ ಟ್ವೀಟರ್ ಖಾತೆಯಲ್ಲಿ ಮಾಹಿತಿ ನೀಡಿದೆ.

* ನಿರ್ದೇಶಕರಾದ ರಮಾನಂದ ಸಾಗರ್ ಅವರು ವಾಲ್ಮೀಕಿ ರಾಮಾಯಣ ಹಾಗೂ ತುಳಸಿದಾಸ್ ಅವರ ರಾಮಚರಿತಮಾನಸ್ ನ ಆಧರಿಸಿ 78 ಎಪಿಸೋಡ್ ಗಳ ರಾಮಾಯಣವನ್ನು ನಿರ್ದೇಶಿಸಿದ್ದರು.

*1987ರಜನವರಿ25ರಿಂದ1988ರಜುಲೈ31ರವರೆಗೆಈಧಾರಾವಾಹಿಮೊದಲ ಬಾರಿಗೆಪ್ರಸಾರವಾಗಿತ್ತು.

# Current affairs of May 2020 from KPSC Vaani

*** 02 05 2020 ಕೋರೋಣವೈರಸ್:USIIDಯಿಂದಭಾರತಕ್ಕೆ3ಮಿಲಿಯನ್ USDನೆರವು**




ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್ನ್ಯಾಷನಲ್ ಡೆವಲಪ್ಮೆಂಟ್ (ಯುಎಸ್ಐಐಡಿ)ಯು ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಸಹಾಯ ಮಾಡಲು ಭಾರತಕ್ಕೆ ಹೆಚ್ಚುವರಿ 3 ಮಿಲಿಯನ್ (ಸುಮಾರು 22.5 ಕೋಟಿ) ನೀಡಿತು. ಭಾರತದಲ್ಲಿ ಕರೋನವೈರಸ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆ ಈ ನೆರವು ನೀಡಿರುವದಾಗಿ USIIDತಿಳಿಸಿದೆ.

*** 02 05 2020 ಮೇ 17 ರವರೆಗೆ ಲಾಕ್‌ಡೌನ್ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧಾರ**



ನವದೆಹಲಿ: ಭಾರತದಲ್ಲಿ ಕರೋನವೈರಸ್ ನಿಯಂತ್ರಣಕ್ಕೆ ಬಾರದ ಹಿನ್ನಲೆಯಲ್ಲಿ ರಾಷ್ಟ್ರವ್ಯಾಪಿ ಲಾಕ್‌ಡೌನ್ ಅನ್ನು ಇನ್ನೂ ಎರಡು ವಾರಗಳ ಕಾಲ ವಿಸ್ತರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಮೇ 3 ಕ್ಕೆ ಎರಡನೆ ಹಂತದ ಲಾಕ್ ಡೌನ್ ಮುಕ್ತಾಯಗೊಳ್ಳುವ ಹಿನ್ನಲೆಯಲ್ಲಿ ಈಗ ಮತ್ತೆ ಲಾಕ್ ಡೌನ್ ನ್ನು ಎರಡು ವಾರಗಳ ಕಾಲ ವಿಸ್ತರಿಸಲು ತೀರ್ಮಾನಿಸಲಾಗಿದೆ.

# Current affairs of May 2020 from KPSC Vaani



# Current affairs of May 2020 from KPSC Vaani

### * 03 05 2020 ಕೊರೊನಾ ವಾರಿಯರ್ಸ್ ಭಾರತೀಯ ಸೇನೆಯಿಂದ ಗೌರವ ಸಲ್ಲಿಸಲು ಅಣಿ




ನವದೆಹಲಿ : ಭಾರತದಲ್ಲಿ ವ್ಯಾಪಿಸಿರುವ ನೊವೆಲ್ ಕೊರೊನಾ ವೈರಸ್ ಸೋಂಕಿನ ವಿರುದ್ಧ ಹೋರಾಡುತ್ತಿರುವ ಭಾರತೀಯ ವೈದ್ಯರು, ಪೊಲೀಸರು ಹಾಗೂ ಕಾರ್ಮಿಕರು ಯೋಧರ ರೀತಿಯಲ್ಲಿ ಹೋರಾಡುತ್ತಿದ್ದು, ಭಾರತವನ್ನು ಕೋರೋಣ ಮುಕ್ತವಾಗಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಇವರುಗಳಿಗೆ ವಿಶೇಷ ಗೌರವ ಸಲ್ಲಿಸುವ ಉದ್ದೇಶದಿಂದ ಭಾರತೀಯ ನೌಕಾ ಸೇನೆ ಮತ್ತು ವಾಯುಸೇನೆಗಳು ತಯಾರಿನಡೆಸಿದ್ದು, ದಿನಾಂಕ ಮೇ.03 ರಂದು ಭಾನುವಾರ ದೇಶಾದ್ಯಂತ ಕೊರೊನಾ ವೈರಸ್ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಗಳ ಮೇಲೆ ಹೆಲಿಕಾಪ್ಟರ್ ಗಳನ್ನೂ ಬಳಸಿ ಪುಷ್ಪಗಳ ಮಳೆಗರೆಯಲಿವೆ.

### * 03 05 2020 ಕೋವಿಡ್ 19: ಭಾರತಕ್ಕೆ 7 ಮೆಟ್ರಿಕ್ ಟನ್ ವೈದ್ಯಕೀಯ ಸಾಮಗ್ರಿ ಪೂರೈಸಿದ ಯುಎಇ



ನವದೆಹಲಿ : ಭಾರತದ ಕೋವಿಡ್ 19ರ ವಿರುದ್ಧದ ಹೋರಾಟಕ್ಕೆ ನೆರವಾಗಲು ಸಂಯುಕ್ತ ಅರಬ್ ಗಣರಾಜ್ಯ(UAE)ವು ಸುಮಾರು ಏಳು ಮೆಟ್ರಿಕ್ ಟನ್‌ಗಳಷ್ಟು ವೈದ್ಯಕೀಯ ಅಗತ್ಯ ಸಾಮಗ್ರಿಗಳನ್ನು ರಫ್ತುಮಾಡಿದೆ. ಈ ರಫ್ತು ಪೂರೈಕೆಯಲ್ಲಿ ಸುಮಾರು 7000 ಕೊರೋನ ವೈರಸ್ ವಿರುದ್ಧ ಹೋರಾಡುತ್ತಿರುವ ವೈದ್ಯಕೀಯ ವೃತ್ತಿಪರರಿಗೆ ನೆರವಾಗಬಹುದೆಂದು UAE ತಿಳಿಸಿದೆ.

* ಯುಎಇ ಈವರೆಗೆ 34ಕ್ಕೂ ಅಧಿಕ ದೇಶಗಳಿಗೆ 348 ಟನ್‌ಗೂ ಹೆಚ್ಚಿನ ವೈದ್ಯಕೀಯ ಸಾಮಗ್ರಿಗಳನ್ನು ರಫ್ತು ಮಾಡಲಾಗಿದ್ದು ಈ ಮೂಲಕ ಸುಮಾರು 3,48,000 ವೈದ್ಯಕೀಯ ವೃತ್ತಿಪರರಿಗೆ ನೆರವಾಗಿದೆ.


# Current affairs of May 2020 from KPSC Vaani

*** 03 05 2020 ಕೇಂದ್ರಜಲಶಕ್ತಿಸಚಿವಾಲಯದಿಂದIDEAthonಪ್ರಾರಂಭ**



ಕೇಂದ್ರ ಜಲಶಕ್ತಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛ ಗಂಗಾ ರಾಷ್ಟ್ರೀಯ ಮಿಷನ್ "ಐಡಿಇಥಾನ್" ಅನ್ನು ಆರಂಭಿಸಿದೆ. COVID 19 ನಿಂದಾಗಿ ದೇಶದಲ್ಲಿ ವಿಧಿಸಿರುವ ಲಾಕ್ ಡೌನ್ ನದಿ ನಿರ್ವಹಣಾ ಕಾರ್ಯತಂತ್ರಗಳನ್ನು ಹೇಗೆ ಬದಲಾಯಿಸುತ್ತದೆ ಎಂಬುದನ್ನು ಅನ್ವೇಷಿಸಲು ನೆರವಾಗಲಿದೆ.

*** 03 05 2020 ಭೂಮಿಯ ಕಾಂತಗೋಳವನ್ನು ಅಭ್ಯಸಿಸಲು ಭಾರತೀಯ ವಿಜ್ಞಾನಿಗಳ ಹೊಸ ಕೋಡ್**



ಭೂಮಿಯ ಕಾಂತಗೋಳದಲ್ಲಿ ವಿದ್ಯುತ್ ಕ್ಷೇತ್ರದ ರಚನೆ ಕುರಿತು ಅಧ್ಯಯನ ಮಾಡಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜಿಯೋಮ್ಯಾಗ್ನೆಟಿಸಂ(IIG)ನ ಭಾರತೀಯ ವಿಜ್ಞಾನಿಗಳು ನೂತನ ದ್ರವ ಸಿಮ್ಯುಲೇಶನ್ ಕೋಡ್ ಅನ್ನು ಅಭಿವೃದ್ಧಿಪಡಿಸಿದ್ದಾರೆ.

* ಈ ನೂತನ ದ್ರವ ಸಿಮ್ಯುಲೇಶನ್ ಕೋಡ್ ಇಂದಾಗಿ ಭವಿಷ್ಯದ ಬಾಹ್ಯಾಕಾಶ ಯೋಜನೆಗಳನ್ನು ಯೋಜಿಸಲು ಸಹಾಯ ಮಾಡುತ್ತದೆ.

# Current affairs of May 2020 from KPSC Vaani

*** 03 05 2020 ನಿತ್ಯೋತ್ಸವ ಕವಿ ಎಂದೇ ಹೆಸರಾಗಿದ್ದ ಕವಿ ನಿಸಾರ್ ಅಹಮದ್ ಇನ್ನಿಲ್ಲ**




ಬೆಂಗಳೂರು: ನಿತ್ಯೋತ್ಸವ ಕವಿ ನಿಸಾರ್ ಅಹಮದ್ ತಮ್ಮ 84 ವಯಸ್ಸಿನಲ್ಲಿ ಬೆಂಗಳೂರಿನ ತಮ್ಮ ಸ್ವಗೃಹದಲ್ಲಿಭಾನುವಾರನಿಧನರಾದರು.
* ನಿತ್ಯೋತ್ಸವಕವಿ : 'ಜೋಗದಸಿರಿಬೆಳಕಿನಲ್ಲಿ...' ನಿಸಾರ್ ಅಹಮದ್ ಅವರ ಜನಪ್ರಿಯ ಕೃತಿಯಾದುದರಿಂದ ಇವರು ನಿತ್ಯೋತ್ಸವ ಕವಿ ಜನಮನದಲ್ಲಿ ಗುರುತಿಸಿಕೊಂಡಿದ್ದಾರೆ.
* ಪ್ರೊ.ಕೆ.ಎಸ್.ನಿಸಾರ್ ಅಹಮದ್ ಅವರ ಪೂರ್ಣ ಹೆಸರು ಕೊಕ್ಕರೆ ಹೊಸಳ್ಳಿ ಶೇಖ್ ಹೈದರ ನಿಸಾರ್ ಅಹಮದ್. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯಲ್ಲಿ ಫೆಬ್ರುವರಿ 5, 1936ರಲ್ಲಿಜನಿಸಿದರು.
* ಶ್ರೀಯುತರ 21 ಕವನ ಸಂಕಲನಗಳು, 14 ವೈಚಾರಿಕ ಕೃತಿಗಳು, 5 ಮಕ್ಕಳ ಸಾಹಿತ್ಯ ಕೃತಿಗಳು, 5 ಅನುವಾದ ಕೃತಿಗಳು, 13 ಸಂಪಾದನಾಗ್ರಂಥಗಳುಪ್ರಕಟವಾಗಿವೆ.
* ಅವುಗಳಲ್ಲಿ ಮನಸು ಗಾಂಧಿಬಜಾರು, ನಿತ್ಯೋತ್ಸವ ಹಾಗೂ ಕುರಿಗಳು ಸಾರ್ ಕುರಿಗಳು ಪ್ರಸಿದ್ಧವಾಗಿವೆ.
* ಪ್ರಶಸ್ತಿ,ಗೌರವಗಳು : 2006ರಮಾಸ್ತಿಪ್ರಶಸ್ತಿ,ಅನಕೃಪ್ರಶಸ್ತಿ,ಕೆಂಪೇಗೌಡಪ್ರಶಸ್ತಿ,ಪಂಪ ಪ್ರಶಸ್ತಿ,ರಾಜ್ಯೋತ್ಸವಪ್ರಶಸ್ತಿ(1981), ನಾಡೋಜ ಪ್ರಶಸ್ತಿ (2003) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೊರೂರು ಪ್ರಶಸ್ತಿ, ಅರಸು ಪ್ರಶಸ್ತಿ (2006) ಶಿವಮೊಗ್ಗದಲ್ಲಿ ನಡೆದ 73ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

*** 04 05 2020 ಜಿಯೋ ಪ್ಲಾಟ್‌ಫಾರ್ಮ್ಸ್‌ನಲ್ಲಿ 5,655.75 ಕೋಟಿ ರೂ. ಹೂಡಿಕೆ ಮಾಡಿದ ಸಿಲ್ವರ್‌ಲೇಕ್**




ನವದೆಹಲಿ: ಇತ್ತೀಚೆಗೆ ಸಾಮಾಜಿಕ ಜಾಲತಾಣ ಸಂಸ್ಥೆಯಾದ ಫೇಸ್ ಬುಕ್ Jio ಕಂಪನಿಯಲ್ಲಿ ಹೂಡಿಕೆ ಮಾಡಿದ ಬೆನ್ನಲ್ಲೇ ಜಾಗತಿಕ ಮಟ್ಟದ ತಂತ್ರಜ್ಞಾನ ಸಂಸ್ಥೆ ಸಿಲ್ವರ್ ಲೇಕ್ ಕೂಡ ಜಿಯೊ ಮೊಬೈಲ್ ಡಿಜಿಟಲ್ ಕಂಪೆನಿಯಲ್ಲಿ ಹೂಡಿಕೆ ಮಾಡುವುದಾಗಿ ಘೋಷಿಸಿಕೊಂಡಿದೆ. ಸಿಲ್ವರ್ ಲೇಕ್ ಒಟ್ಟು 5 ಸಾವಿರದ 655.75ಕೋಟಿ ರೂಪಾಯಿಗಳು ಹೂಡಿಕೆ ಮಾಡಲಿದೆ.

# Current affairs of May 2020 from KPSC Vaani

### * 05 05 2020 ಜನಪ್ರಿಯ "ದುಬೈ ಎಕ್ಸ್ ಪೋ 2020" ಒಂದು ವರ್ಷ ಮುಂದೂಡಿಕೆ



ದುಬೈ: ಜಗತ್ತಿನ ವಿವಿಧ ರಾಷ್ಟ್ರಗಳು ಭಾಗವಹಿಸುವ ಹಾಗು ಸುದೀರ್ಘ ಆರು ತಿಂಗಳುಗಳ ಕಾಲ ನಡೆಯುವ ಜಾಗತಿಕ ಪ್ರಸಿದ್ಧಿಯನ್ನು ಪಡೆದಿರುವ 'ದುಬೈ ಎಕ್ಸ್ ಪೋ'ವನ್ನು ಕೋರೋಣ ವೈರಸ್ ಭೀತಿ ಹಿನ್ನಲೆ ಒಂದು ವರ್ಷಗಳ ಕಾಲ ಮುಂದೂಡಲಾಗಿದೆ. ಇದೇ ಬರುವ ಅಕ್ಟೋಬರ್ ನಲ್ಲಿ ನಡೆಯಬೇಕಿದ್ದ ಈ ಜನಪ್ರಿಯ ಎಕ್ಸ್ ಪೋವನ್ನು ಮುಂದಿನ ವರ್ಷದ ಅಕ್ಟೋಬರ್ 1ರಿಂದ 2022ರ ಮಾರ್ಚ್ 31ರವರೆಗೆ ನಡೆಸಲು ತೀರ್ಮಾನಿಸಲಾಗಿದೆ.

### * 05 05 2020 ಲಿಕ್ಕರ್ ಮೇಲೆ ಶೇ.70 'ಕೊರೋನ ಶುಲ್ಕ' ವಿಧಿಸಿದ ದಿಲ್ಲಿ ಸರಕಾರ



ನವದೆಹಲಿ : ಕೇಂದ್ರ ಸರ್ಕಾರ ಮದ್ಯ ಮಾರಾಟಕ್ಕೆ ಅನುಮತಿ ನೀಡಿದ ಬೆನ್ನಲ್ಲೇ ದೆಹಲಿ ಸರಕಾರ ಮದ್ಯದ ಮೇಲೆ ಹೆಚ್ಚುವರಿ ಶೇ.70ರಷ್ಟು ಕೋರೋಣ ಶುಲ್ಕವನ್ನು ವಿಧಿಸಲು ನಿರ್ಧರಿಸಿದೆ. ಪ್ರತಿ ಬಾಟಲ್‌ನ ಗರಿಷ್ಠ ಚಿಲ್ಲರೆ ದರ ಅಥವಾ ಎಂಆರ್‌ಪಿ ಮೇಲೆ ಶೇ.70ರಷ್ಟು ತೆರಿಗೆ ವಿಧಿಸಲಾಗುತ್ತದೆ. ಸೋಮವಾರ ಮುಖ್ಯಮಂತ್ರಿ ಕೇಜ್ರಿವಾಲ್ ಸಂಪುಟ ಸಭೆ ಕರೆದು ಮದ್ಯದ ಮೇಲೆ ಶೇ.70ರಷ್ಟು ತೆರಿಗೆ ವಿಧಿಸುವ ನಿರ್ಧಾರ ಕೈಗೊಂಡಿದ್ದಾರೆ.

# Current affairs of May 2020 from KPSC Vaani



# Current affairs of May 2020 from KPSC Vaani

*** 05 05 2020 ಸ್ಮಾರ್ಟ್‌ಸಿಟಿಯೋಜನೆ:ಮೂರನೇಹಂತದಲಾಕ್‌ಡೌನ್‌ನಿಂದ 50ನಗರಗಳಲ್ಲಿ ಕಂಟ್ರೋಲ್ ರೂಮಗಳು ಆರಂಭ**




ಭಾರತಸರ್ಕಾರವುCOVID 19ಲಾಕ್‌ಡೌನ್‌ನಮೂರನೇಹಂತವನ್ನುಜಾರಿಗೆತಂದಿದೆ.ಮೂರನೆಯಹಂತದ ಲಾಕ್ ಡೌನ್ ಸಡಿಲಗೊಳಿಸುವ ನಿರ್ಬಂಧಗಳನ್ನು ದೇಶಾದ್ಯಂತ ಜಾರಿಮಾಡಲಾದ ಹಿನ್ನಲೆ, ಪ್ರಮುಖ ನಗರಗಳಲ್ಲಿ ಇನ್ನೂ ವೈರಸ್ ಹರಡುವಿಕೆಗೆ ಹೆಚ್ಚಾಗಬಹುದಾದ ಸಾಧ್ಯತೆಯಿರುವದರಿಂದ, ವೈರಸ್ ವಿರುದ್ಧ ಹೆಚ್ಚು ಪರಿಣಾಮಕಾರಿಯಾಗಿ ಹೋರಾಡಲು ಮತ್ತು ಅದರ ವಿರುದ್ಧ ಕ್ರಮ ಕೈಗೊಳ್ಳಲು ಸ್ಮಾರ್ಟ್ ಸಿಟಿಗಳಲ್ಲಿನಿಯಂತ್ರಣಕೊಠಡಿಗಳನ್ನುಸ್ಥಾಪಿಸಲಾಗಿದೆ.


*** 05 05 2020 ಕಾಶ್ಮೀರದ ಮೂವರು ಫೋಟೋಗ್ರಾಫರ್‌ಗಳಿಗೆ ಪ್ರತಿಷ್ಠಿತ ಪುಲಿಟ್ಜರ್‌ಪ್ರಶಸ್ತಿಗೌರವ**



ನವದೆಹಲಿ: ಪತ್ರಿಕೋದ್ಯಮ ಪ್ರತಿಷ್ಠಿತ ಪಶಸ್ತಿ ಎಂದೇ ಪರಿಗಣಿಸಲಾಗಿರುವ ಅಮೆರಿಕಾದ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು ಈ ಬಾರಿ ಮೂವರು ಭಾರತದ ಕಾಶ್ಮೀರಿ ಪತ್ರಕರ್ತರಿಗೆ ಸಂದಿದೆ. ಸುದ್ದಿ ಸಂಸ್ಥೆಯಾದ ಅಸೋಸಿಯೇಟೆಡ್ ಪ್ರೆಸ್(AP)ನ ಛಾಯಾಗ್ರಾಹಕರಾದ ಜಮ್ಮು ಮತ್ತು ಕಾಶ್ಮೀರದ ಮುಖ್ತಾರ್ ಖಾನ್, ದರ್ ಯಾಸಿನ್ ಹಾಗೂ ಚನ್ನಿ ಆನಂದ್‌ಗೆ ಫೀಚರ್ ವಿಭಾಗದಲ್ಲಿ ಈ ಪ್ರಶಸ್ತಿ ದೊರೆತಿದೆ. 2019ರ ಆಗಸ್ಟ್ 5ರಂದು 370ನೇ ವಿಧಿಯನ್ನು ಕೇಂದ್ರ ಸರ್ಕಾರ ಹಿಂತೆಗೆದುಕೊಂಡ ನಂತರ ಜಮ್ಮು ಮತ್ತು ಕಾಶ್ಮೀರದ ಸುದ್ದಿಗಳನ್ನು ಅಸಾಧಾರಣವಾಗಿ ಸುದ್ದಿ ಮಾಡಿದ್ದಕ್ಕೆ ಈ ವರದಿಗಾರಿಕೆಗೆ ಈ ಮೂವರಿಗೆ ಪುಲಿಟ್ಜೆರ್ ಪ್ರಶಸ್ತಿ ನೀಡಲಾಗಿದೆ ಪುಲಿಟ್ಜೆರ್ ಪ್ರಶಸ್ತಿ : ಪ್ರಶಸ್ತಿಯು 15,000 ಡಾಲರ್ (11.36 ಲಕ್ಷ ರೂ.) ನಗದು ಬಹುಮಾನವನ್ನು ಒಳಗೊಂಡಿದೆ. ಪುಲಿಟ್ಜರ್ ಅಮೆರಿಕಾ ಮೂಲದ ಪತ್ರಕರ್ತರು ಮತ್ತು ಸಂಸ್ಥೆಗಳಿಗೆ ನೀಡುವ ಅತ್ಯುನ್ನತ ಗೌರವವಾಗಿದೆ.

# Current affairs of May 2020 from KPSC Vaani

*** 05 05 2020 ವಿಶ್ವ ಅಸ್ತಮಾ ದಿನ**




ಪ್ರತೀ ವರ್ಷದ ಮೇ ತಿಂಗಳ ಮೊದಲನೇ ಮಂಗಳವಾರದಂದು ವಿಶ್ವ ಅಸ್ತಮಾ ದಿನ ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಈ ಆಚರಣೆಯ ಹಿಂದಿನ ಮುಖ್ಯ ಉದ್ದೇಶ ವಿಶ್ವಾದ್ಯಂತ ಅಸ್ತಮಾರೋಗದ ಬಗೆಗಿನ ಅಪನಂಬಿಕೆಗಳನ್ನು ಹೋಗಲಾಡಿಸುವದು ಮತ್ತು ರೋಗದ ಬಗ್ಗೆ ಜಾಗೃತಿ ಮೂಡಿಸಿ, ರೋಗಿಗಳಿಗೆ ಆತ್ಮಸ್ಥೈರ್ಯವನ್ನು ನೀಡುವದಾಗಿದೆ.

* 1998ರಲ್ಲಿ ಮೊದಲ ಬಾರಿಗೆ ವಿಶ್ವ ಅಸ್ತಮಾ ದಿನಾಚರಣೆಯನ್ನು ಪ್ರತೀ ವರ್ಷ ನಡೆಸಲಾಗುತ್ತದೆ.

* ಬಾರ್ಸಿಲೋನಾದಲ್ಲಿ ನಡೆದ ಮೊದಲ ವಿಶ್ವ ಅಸ್ತಮಾ ಸಮಾವೇಶದ ಸವಿ ನೆನಪಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ.

*** 05 05 2020 ಕೇಂದ್ರ ಸರ್ಕಾರದಿಂದ "ಅಟಲ್ ಬಿಮಿಟ್ ವ್ಯಕ್ತಿ ಕಲ್ಯಾಣ್" ಯೋಜನೆ**



ಕೇಂದ್ರ ಸರ್ಕಾರವು ಕೆಲಸ ಕಳೆದುಕೊಂಡ ಅಥವಾ ಸಂಬಳ ಸಿಗದ ಉದ್ಯೋಗಿಗಳಿಗೆ ನೆರವು ನೀಡುವ ಉದ್ದೇಶದಿಂದ ನೂತನ ಯೋಜನೆಯೊಂದನ್ನು ಜಾರಿಗೆ ತಂದಿದ್ದು ಈ ಯೋಜನೆಯಡಿ ಸರ್ಕಾರ ಎರಡು ವರ್ಷಗಳವರೆಗೆ ಆರ್ಥಿಕ ಸಹಾಯವನ್ನು ನೀಡಲಿದೆ ಹಾಗು ಈ ಆರ್ಥಿಕ ಸಹಾಯವನ್ನು ಪ್ರತಿ ತಿಂಗಳು ನೀಡಲಾಗುವುದು.

* ತಪ್ಪು ನಡವಳಿಕೆಯಿಂದ ಕಂಪನಿಯಿಂದ ತೆಗೆದುಹಾಕಲ್ಪಟ್ಟ ಉದ್ಯೋಗಿಗಳಿಗೆ ಈ ಯೋಜನೆಯ ಲಾಭ ದೊರೆಯುವುದಿಲ್ಲ, ಹಾಗೂ ಕ್ರಿಮಿನಲ್ ಪ್ರಕರಣಗಳ ಅಥವಾ ಸ್ವಯಂಪ್ರೇರಿತ ನಿವೃತ್ತಿ ತೆಗೆದುಕೊಳ್ಳುವ ನೌಕರರು ಸಹ ಯೋಜನೆಯ ಲಾಭವನ್ನು ಪಡೆಯಲು ಸಾಧ್ಯವಾಗುವುದಿಲ್ಲ.

# Current affairs of May 2020 from KPSC Vaani

*** 05 05 2020 ನ್ಯೂಯಾರ್ಕ್ ಕೋರ್ಟ್‌ನಲ್ಲಿ ಜಡ್ಜ್ ಆಗಿ ಭಾರತೀಯ ಮೂಲದ ಸರಿತಾ ನಾಮ ನಿರ್ದೇಶನ**




ಈ ಮೊದಲು ಸರಿತಾ ಕೋಮಟಿ ರೆಡ್ಡಿ ಅವರು ನ್ಯೂಯಾರ್ಕ್‌ನ ಈಸ್ಟರ್ನ್ ಡಿಸ್ಟ್ರಿಕ್ಟ್‌ನ ಯುಎಸ್ ಅಟರ್ನಿ ಕಚೇರಿಯ ಜನರಲ್ ಕ್ರೈಮ್ಸ್ ಉಪ ಮುಖ್ಯಸ್ಥರಾಗಿ ಮತ್ತು ಕೊಲಂಬಿಯಾ ಲಾ ಸ್ಕೂಲ್‌ನಲ್ಲಿಯೂ ಉಪನ್ಯಾಸಕಿ ಆಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸ್ತುತ ಸರಿತಾ ಕೋಮಟಿ ರೆಡ್ಡಿ ಅವರು ನ್ಯೂಯಾರ್ಕ್ ಫೆಡರಲ್ ಕೋರ್ಟ್‌ನ ಜಡ್ಜ್ ಆಗಿ ನೇಮಕ ಗೊಂಡಿದ್ದಾರೆ. ಅಮೆರಿಕಾದ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಅವರು ಸರಿತಾರನ್ನ ನಾಮನಿರ್ದೇಶನ ಮಾಡಿ, ಯುಎಸ್ ಸೆನೆಟ್‌ಗೆ ಕಳಿಸಿಕೊಟ್ಟಿದ್ದಾರೆ.

*** 06 05 2020 ರಾಜ್ಯ ಸರ್ಕಾರದಿಂದ ನೇಕಾರರಿಗೆ `ನೇಕಾರ್ ಸಮ್ಮಾನ್' ಯೋಜನೆ ಮೂಲಕ 2 ಸಾವಿರ ರೂ ಘೋಷಣೆ**




ಬೆಂಗಳೂರು : ರಾಜ್ಯದಲ್ಲಿ ವಿಧಿಸಿರುವ ಲಾಕ್ ಡೌನ್ ನಿಂದಾಗಿ ಸಂಕಷ್ಟದಲ್ಲಿರುವ ರಾಜ್ಯದ ನೇಕಾರರಿಗೆ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ "ನೇಕಾರ್ ಸಮ್ಮಾನ್" ಯೋಜನೆ ಘೋಷಿಸಿದ್ದಾರೆ. ಈ ಯೋಜನೆಯಡಿ ನೇಕಾರರಿಗೆ ಪ್ರತಿ ವರ್ಷ 2ಸಾವಿರ ರೂ.ಆರ್ಥಿಕ ನೆರವು ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ.

* ಲಾಕ್ ಡೌನ್ ನಿಂದ ಸಂಕಷ್ಟದಲ್ಲಿರುವ ನೇಕಾರರಿಗೆ 80 ಕೋಟಿ ರೂ. ಸಾಲಮನ್ನಾ ಮಾಡಲು ಹಣ ಬಿಡುಗಡೆಮಾಡಲಾಗಿದ್ದು, ಹೊಸ ಸಾಲ ಪಡೆಯಲು ಕೂಡ ನೇಕಾರರಿಗೆ ಅವಕಾಶ ನೀಡಲಾಗಿದೆ.


* ನೇಕಾರರ ಸಮ್ಮಾನ್ ಯೋಜನೆಯಡಿ ರಾಜ್ಯದ ಒಟ್ಟು 54 ಸಾವಿರ ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ 2 ಸಾವಿರ ರೂ. ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

# Current affairs of May 2020 from KPSC Vaani



# Current affairs of May 2020 from KPSC Vaani

*** 07 05 2020 ಕೊರೋನ ಪ್ರಕೃತಿಯಲ್ಲಿ ಸಹಜವಾಗಿ ವಿಕಾಸಗೊಂಡ ವೈರಸ್ : ಆಯಂಟನಿ ಫೌಸಿ**



ಜಿನೀವ (ಸ್ವಿಟ್ಸರ್‌ಲ್ಯಾಂಡ್) : ಜಗತ್ತಿನಾದ್ಯಂತ ಮಾರಕವಾಗಿ ವ್ಯಾಪಿಸುತ್ತಿರುವ ಕೊರೋನ ವೈರಸ್ ಚೀನಾ ದೇಶದ ವುಹಾನ್ ನಗರದ ಪ್ರಯೋಗಾಲಯವೊಂದರಲ್ಲಿ ಕೃತಕವಾಗಿ ಸೃಷ್ಟಿಸಲಾಗಿದೆ ಎಂದು ಅಮೆರಿಕಾವು ಆರೋಪಿಸುತ್ತ ಬಂದಿರುವ ಹಿನ್ನಲೆಯಲ್ಲಿ ಅಮೆರಿಕದವರೇಯಾದ ಸಾಂಕ್ರಾಮಿಕ ರೋಗಗಳ ತಜ್ಞ ಆಯಂಟನಿ ಫೌಸಿ ಅವರು "ಕೋರೋಣ ಸೋಂಕು ಪ್ರಕೃತಿಯಲ್ಲಿ ಸಹಜವಾಗಿಯೇ ವಿಕಾಸಗೊಂಡಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಕೋರೋಣ ವೈರಸ್ ಪ್ರಯೋಗಾಲಯದಲ್ಲಿ ಸೃಷ್ಟಿಸಲ್ಪಟ್ಟಿದೆ ಎನ್ನುವುದಕ್ಕೆ ಸಾಕ್ಷಿಗಳಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಯೂ ಅಭಿಪ್ರಾಯ ವ್ಯಕ್ತಪಡಿಸಿದೆ.

*** 07 05 2020 ಭಾರತದಿಂದ ಯುರೋಪಿಗೆ 1,000 ಟನ್ನಳಷ್ಟು ಪ್ಯಾರಾಸಿಟಮಲನ ಕಚ್ಚಾ ಪದಾರ್ಥಗಳ ರವಾನೆ**



ನವದೆಹಲಿ : ಸಾಮಾನ್ಯ ನೋವು ನಿವಾರಕ ಔಷದಿಯಾದ ಪ್ಯಾರಾಸಿಟಮಲನ ತಯಾರಿಕೆಗೆ ಅಗತ್ಯವಾಗಿರುವ ಮುಖ್ಯ ಕಚ್ಚಾ ಪದಾರ್ಥಗಳನ್ನು ಭಾರತವು ಯುರೋಪ್ ರಾಷ್ಟ್ರಕ್ಕೆ ರಫ್ತು ಮಾಡಲು ಸಿದ್ಧತೆ ನಡೆಸಿದೆ. ಭಾರತವು ಸುಮಾರು 1,000 ಟನ್ ಸಕ್ರಿಯ ಔಷಧೀಯ ಘಟಕಾಂಶ (API)ವನ್ನು ಯುರೋಪಿಗೆ ಪೂರೈಸಲಿದೆ ಎಂದು ಭಾರತೀಯ ಔಷಧಿ ರಫ್ತು ಉತ್ತೇಜನ ಮಂಡಳಿ (ಫಾರ್ಮೆಕ್ಸಿಲ್) ತಿಳಿಸಿದೆ.

* ಐರೋಪ್ಯ ಒಕ್ಕೂಟವು ಭಾರತದಿಂದ ಪ್ಯಾರಾಸಿಟಮಲ್ ಎಪಿಐಗಳ ಅತ್ಯಂತ ದೊಡ್ಡ ಖರೀದಿದಾರನಾಗಿದ್ದು ಪ್ರತಿವರ್ಷ ಸುಮಾರು 12,000 ಟನ್‌ಗಳಷ್ಟು ಆಮದು ಮಾಡಿಕೊಳ್ಳುತ್ತಿದೆ.

# Current affairs of May 2020 from KPSC Vaani

*** 08 05 2020 ವಿಶಾಖಪಟ್ಟಣಂ ವಿಷಾನಿಲ ದುರಂತ**



ಬೆಂಗಳೂರು : ದಿನಾಂಕ 07 ಏಪ್ರಿಲ್ 2020 ರಂದು ಬೆಳಗ್ಗೆ ವಿಶಾಖಪಟ್ಟಣಂನ ರಾಸಾಯನಿಕ ಸ್ಥಾವರದಿಂದ ಅನಿಲ ಸೋರಿಕೆಯಿಂದಾಗಿ ಸುತ್ತಲಿನ ಐದು ಕಿಲೋಮೀಟರ್ ಗಳಲ್ಲಿನ ಹಳ್ಳಿಗಳಿಗೆ ವ್ಯಾಪಿಸಿತು, ಘಟನೆ ಹಿನ್ನೆಲೆಯಲ್ಲಿ ಹಲವು ಮಂದಿ ಸಾವಿಗೀಡಾಗಿದ್ದು, ಸಾವಿರಾರು ಮಂದಿ ತೀವ್ರ ಅಸ್ವಸ್ಥಗೊಂಡಿದ್ದು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಲಾಕ್ ಡೌನ್ ಸಮಯದಲ್ಲಿ ಮುಚ್ಚಿದ ಪ್ಲಾಸ್ಟಿಕ್ ಕಾರ್ಖಾನೆಯನ್ನು ಪುನರಾರಂಭಿಸುವ ಸಿದ್ಧತೆ ನಡೆಯುತ್ತಿರುವಾಗ ಈ ಘಟನೆ ನಡೆದಿದೆ ಎಂದು ವರದಿಯಾಗಿದೆ. ಕಾರ್ಖಾನೆಯ ಸುತ್ತ ಸುಮಾರು ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ 200 250 ಕುಟುಂಬಗಳಿಂದ ಸುಮಾರು 500 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ ಎಸ್ ಜಗನ್ಮೋಹನ್ ರೆಡ್ಡಿ ಈ ಬಗ್ಗೆ ತನಿಖೆ ನಡೆಸಲು ಆದೇಶಿಸಿದ್ದು, ಮೃತರ ಬಂಧುಗಳಿಗೆ 1 ಕೋಟಿ ರೂ.ಗಳ ಸಹಾಯವನ್ನು ಘೋಷಿಸಿದ್ದಾರೆ.

*** 08 05 2020 ಆಯುಷ್ ಔಷಧಿಗಳ ಕ್ಲಿನಿಕಲ್ ಪ್ರಯೋಗಗಳನ್ನು ಆರಂಭಿಸಿದ ಭಾರತ**



ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಆಯುಷ್ ಔಷಧಿಗಳ ಕ್ಲಿನಿಕಲ್ ಪ್ರಯೋಗಗಳನ್ನು ಆರಂಭಿಸಿದೆ. COVID 19 ಸೋಂಕಿನ ವಿರುದ್ಧ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಪ್ರೇರಿತ ಆರೋಗ್ಯ ಕಾರ್ಯಕರ್ತರ ಮೇಲೆ ಈ ಔಷಧಿಗಳ ಪ್ರಯೋಗಗಳನ್ನು ನಡೆಸಲಾಗುವುದು.

* ಆಯುಷ್ ಔಷಧಿಗಳಾದ ಅಶ್ವಗಂಧ, ಗುಡುಚಿ, ಯಶಿತಿಮಾಧುಗಳ ವೈದ್ಯಕೀಯ ಪರೀಕ್ಷೆಗಳನ್ನು ಸ್ವಯಂಪ್ರೇರಿತ ಆರೋಗ್ಯ ಕಾರ್ಯಕರ್ತರ ಮೇಲೆ ನಡೆಲಗುವದು, ಜೊತೆಗೆ ದೇಶದಲ್ಲಿ ಅತಿ ಹೆಚ್ಚು ಸೋಂಕು ಪತ್ತೆಯಾದ ಪ್ರದೇಶಗಳಲ್ಲಿ ಈ ಪ್ರಯೋಗಗಳನ್ನು ನಡೆಸಲಾಗುವದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆಯುಷ್ ಮತ್ತು ICIR (ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ) ಜಂಟಿಯಾಗಿ ಈ ಕಾರ್ಯಕ್ರಮವನ್ನು ಜಾರಿಮಾಡಲಿವೆ.

# Current affairs of May 2020 from KPSC Vaani

*** 08 05 2020 ಲಾಂಗ್‌ಮಾರ್ಚ್5B:ಚೀನಾದಹೊಸರಾಕೆಟ್‌ಉಡಾವಣೆಯಶಸ್ವಿ**



ಚೀನಾ ತನ್ನ ಹೈನಾನ್ ದ್ವೀಪದಲ್ಲಿರುವ ವೆನ್ಚಾಂಗ್ ಉಡಾವಣಾ ತಾಣದಿಂದ ಲಾಂಗ್ ಮಾರ್ಚ್ 5 ಬಿ ರಾಕೆಟ್ ಅನ್ನು ಯಶಸ್ವಿಯಾಗಿ ಉಡಾಯಿಸಿತು. ಈ ರಾಕೆಟ್ ಒಂದು ಬೃಹತ್ ವಾಹನವಾಗಿದ್ದು, ಇದನ್ನು ನಾಸಾದ ಡೀಪ್ ಸ್ಪೇಸ್ ಓರಿಯನ್ ಕ್ಯಾಪ್ಸುಲ್ನೊಂದಿಗೆ ಹೋಲಿಸಲಾಗುತ್ತಿದೆ. ಭವಿಷ್ಯದಲ್ಲಿ ಶಾಶ್ವತವಾದ "ಟಿಯಾಂಗಾಂಗ್" ಎಂಬ ಬೃಹತ್ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸುವ ಮತ್ತು ಗಗನಯಾತ್ರಿಗಳನ್ನು ಚಂದ್ರನಿಗೆ ಕಳುಹಿಸಲು ಅನುಕೂಲವಾಗುವಂತೆ ಚೀನಾ ಈ ನೂತನ ರಾಕೆಟ್ ಅಭಿವೃದ್ಧಿಪಡಿಸಿ ನೌಕೆಯನ್ನು ಉಡಾಯಿಸಿತು.

*** 08 05 2020 ಭಾರತೀಯರ ರಕ್ಷಣೆಗೆ ನೌಕಾದಳದಿಂದ ಆಪರೇಷನ್ ಸಮುದ್ರ ಸೇತು**



ನವದೆಹಲಿ: ಕೋರೋಣ ವೈರಸ್ ಜಾಗತಿಕವಾಗಿ ವ್ಯಾಪಿಸುತ್ತಿರುವ ಹಿನ್ನಲೆ ಬಹುತೇಕ ಎಲ್ಲ ರಾಷ್ಟ್ರಗಳು ಲಾಕ್ ಡೌನ್ ವಿಧಿಸಿವೆ, ಇದರಿಂದಾಗಿ ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯರನ್ನು ಸಮುದ್ರ ಮಾರ್ಗದ ಮೂಲಕ ಭಾರತಕ್ಕೆ ಕರೆತರಲು ಆಪರೇಷನ್ ಸಮುದ್ರ ಸೇತು ಕಾರ್ಯಾಚರಣೆಯನ್ನು ಭಾರತೀಯ ನೌಕಾ ಸೇನೆಯು ಆರಂಭಿಸಿದೆ. ಈಗಾಗಲೇ ಭಾರತೀಯ ನೌಕಾದಳದ ಐಎನ್ಎ ಜಲಾಶ್ವ ನೌಕೆ ಮಾಲ್ಡೀವ್ಸ್‌ನ ರಾಜಧಾನಿ ಮಾಲೆ ತಲುಪಿ, ದ್ವೀಪರಾಷ್ಟ್ರದಲ್ಲಿ ಸಂಕಷ್ಟದಲ್ಲಿರುವ ಒಂದು ಸಾವಿರಕ್ಕೂ ಅಧಿಕ ಭಾರತೀಯರನ್ನು ಹೊತ್ತ ಹಡಗು ಕೇರಳದ ಕೊಚ್ಚಿಗೆ ಮರಳಲಿದೆ.

# Current affairs of May 2020 from KPSC Vaani

## * 09 05 2020 ವಂದೇಭಾರತ್‌ಮಿಷನ್:ಮೇ15ರಿಂದ2ನೇಹಂತದರಕ್ಷಣಾ ಕಾರ್ಯಾಚರಣೆ



ನವದೆಹಲಿ : ಬಹುತೇಕ ರಾಷ್ಟ್ರಗಳಲ್ಲಿ ಕೋರೋಣ ಸೋಂಕಿನ ವಿರುದ್ಧ ಹೋರಾಡಲು ವಿಧಿಸಿರುವ ಲಾಕ್ ಡೌನ್ ನಿಂದಾಗಿ ವಿದೇಶಗಳಲ್ಲಿ ಸಿಲುಕಿರುವ ಭಾರತೀಯರ ರಕ್ಷಣೆಗಾಗಿ ಕೇಂದ್ರ ಸರ್ಕಾರವು "ವಂದೇ ಭಾರತ್ ಮಿಷನ್" ಹೆಸರಿನಲ್ಲಿ ಕೇಂದ್ರ ಸರ್ಕಾರ ಕಾರ್ಯಾಚರಣೆ ಕೈಗೊಂಡಿದೆ. "ವಂದೇ ಭಾರತ್ ಮಿಷನ್" ಅಡಿಯಲ್ಲಿ ಗಲ್ಫ್ ರಾಷ್ಟ್ರಗಳು ಸೇರಿ ವಿವಿದೆಡೆ ಸಿಲುಕಿದ್ದ ನೂರಾರು ಪ್ರಯಾಣಿಕರನ್ನು ಯಶಸ್ವಿಯಾಗಿ ಭಾರತಕ್ಕೆ ಕರೆತರಲಾಗಿದೆ. ದಿನಾಂಕ ಮೇ 15 ರಿಂದ ಎರಡನೇ ಹಂತದ ಕಾರ್ಯಾಚರಣೆ ಆರಂಭಿಸಲಿದ್ದು ವಿವಿಧ ರಾಷ್ಟ್ರಗಳಲ್ಲಿ ಸಿಲುಕಿರುವ ಭಾರತೀಯರ ರಕ್ಷಣಾ ಕಾರ್ಯ ಮುಂದುವರೆಯಲಿದೆ.

## * 09 05 2020 ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಭಾರತದಲ್ಲಿ ಶೇ.23ರಷ್ಟು ತಗ್ಗಿದ ವಿದ್ಯುತ್‌ಬಳಕೆ



ಬೆಂಗಳೂರು : ದೇಶದಲ್ಲಿ ವಿಧಿಸಿರುವ ಕೊರೊನಾ ಲಾಕ್‌ಡೌನ್‌ನಿಂದಾಗಿ ಬಹುತೇಕ ಎಲ್ಲ ಕಾರ್ಖಾನೆ, ಕಚೇರಿಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು, ಇದೆ ಕಾರಣದಿಂದಾಗಿ ದೇಶದಲ್ಲಿ ವಿದ್ಯುತ್ ಬಳಕೆಯಲ್ಲಿ ಶೇ.23ರಷ್ಟು ಕಡಿತವಾಗಿದೆ. ಏಪ್ರಿಲ್‌ನಲ್ಲಿ ಶೇ.22.75 ವಿದ್ಯುತ್ ಬಳಕೆ ಕಡಿತದೊಂದಿಗೆ ಹಾಗು 85.05 ಬಿಲಿಯನ್ ಯುನಿಟ್‌ಗಳಿಗೆ ಇಳಿದಿದೆ ಎಂದು ತಿಳಿದು ಬಂದಿದೆ. ಕಳೆದ ವರ್ಷ ಇದೇ ಅಮಾಯದಲ್ಲಿ ಸುಮಾರು 110.11 ಬಿಲಿಯನ್ ಯುನಿಟ್‌ಗಳಷ್ಟು ವಿದ್ಯುತ್ ಬಳಕೆಯಾಗುತ್ತಿತ್ತು.

## Current affairs of May 2020 from KPSC Vaani


# KSP PSI/PC ಹುದ್ದೆಗಳ ತಯಾರಿಗಾಗಿ ಉತ್ತಮ ಪುಸ್ತಕಗಳನ್ನು ಈಗಲೇ ಖರೀದಿಸಿ




**www.kpscvaani.com/books**

* ಪ್ರತಿ ಪುಸ್ತಕದ ಮೇಲೆ ಉತ್ತಮ ರಿಯಾಯಿತಿ
* ಪ್ರಸಿದ್ಧ ಲೇಖಕರ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ

# Current affairs of May 2020 from KPSC Vaani


*** 09 05 2020 ಕೊಡವಕೌಟುಂಬಿಕಹಾಕಿಜನಕಪಾಂಡಂಡಕುಟ್ಟಪ್ಪ ಇನ್ನಿಲ್ಲ**



ಮಡಿಕೇರಿ : ಕೊಡವ ಕುಟುಂಬಗಳ ನಡುವಿನ ಏರ್ಪಡಿಸುವ ಪ್ರಸಿದ್ಧ ಹಾಕಿ ಪಂದ್ಯಾಳಿಗಳ ಜನಕರಾಗಿರುವ ಪಾಂಡಂಡ ಕುಟ್ಟಪ್ಪ (ಕುಟ್ಟಣಿ) ದಿನಾಂಕ ೦೭ ಮೇ ೨೦೨೦ ರ ಗುರುವಾರ ತಮ್ಮ ೮೬ ನೇ ವಯಸ್ಸಿನಲ್ಲಿ ಬೆಂಗಳೂರಿನ ಅವರ ಸ್ವಗೃಹದಲ್ಲಿ ನಿಧನರಾದರು. ಕುಟ್ಟಪ್ಪ ಅವರು ಹಾಕಿಪ್ರಿಯರಾಗಿದ್ದರು, ಇದೆ ಕಾರಣದಿಂದ ಅವರು ಕೊಡಗಿನಲ್ಲಿ ಹಾಕಿ ಪಂದ್ಯಾಟಕ್ಕೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಕೊಡವ ಕುಟುಂಬಗಳ ನಡುವೆ ಹಾಕಿ ಪಂದ್ಯಾಟ ಆಯೋಜಿಸುವ ಯೋಜನೆ ರೂಪಿಸಿದ್ದರು.

* ಪ್ರತೀ ವರ್ಷ ಕೊಡಗಿನಲ್ಲಿ ಒಲಿಂಪಿಕ್ ಮಾದರಿಯಲ್ಲಿ ಒಂದು ತಿಂಗಳ ಕಾಲ ಕೌಟುಂಬಿಕ ಹಾಕಿ ಪಂದ್ಯಾವಳಿ ನಡೆಯುವುದರೊಂದಿಗೆ ವಿಶ್ವದ ಗಮನಸೆದಿದೆ. ಅಲ್ಲದೆ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲೂ ಸ್ಥಾನ ಪಡೆದಿತ್ತು.

*** 09 05 2020 ಕೊವಿಡ್ 19:ಭಾರತದಲ್ಲಿಚೇತರಿಕೆಪ್ರಮಾಣಶೇ.29.36 ರಷ್ಟು ಕೇಂದ್ರ ಸರ್ಕಾರ**



ನವದೆಹಲಿ : ಭಾರತದ ಒಟ್ಟು ಜಿಲ್ಲೆಗಳ ಪೈಕಿ 216 ಜಿಲ್ಲೆಗಳಲ್ಲಿ ಯಾವುದೇ ಕೊವಿಡ್ 19 ಪ್ರಕರಣಗಳು ಪತ್ತೆಯಾಗಿಲ್ಲ. ಮತ್ತು ಕಳೆದ ಏಳು ದಿನಗಳಿಂದ 46 ಜಿಲ್ಲೆಗಳಲ್ಲಿ ಯಾವುದೇ ಹೊಸ ಪ್ರಕರಣ ವರದಿಯಾಗಿಲ್ಲ. ಭಾರತದಲ್ಲಿ ಚೇತರಿಕೆ ಪ್ರಮಾಣ ಶೇ. 29.36ರಷ್ಟು ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

# Current affairs of May 2020 from KPSC Vaani

*** 10 05 2020 ಮನುಷ್ಯನ ಮೂತ್ರದಿಂದ ಚಂದ್ರನ ಮೇಲೆ ಕಾಂಕ್ರೀಟ್ ತಯಾರಿಗೆ ಸಹಕಾರಿ: ಯುರೋಪ್ ಬಾಹ್ಯಾಕಾಶ ಸಂಸ್ಥೆ**



ಬರ್ಲಿನ್ : ಮಾನವನ ಮೂತ್ರದ ಸಹಾಯದಿಂದ ಚಂದ್ರಗ್ರಹದ ಮೇಲೆ ಕಾಂಕ್ರೀಟ್ ತಯಾರಿಕೆ ಮಾಡಬಹುದು ಎಂದು ಯುರೋಪ್ ನ ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ. ಚಂದ್ರ ಗ್ರಹಕ್ಕೆ ಹೋಗಿ ಬಂದವರಿದ್ದಾರೆ. ಅಲ್ಲಿ ನೆಲೆಸಲು ಪ್ರಯತ್ನಗಳು, ಪ್ರಯೋಗಗಳು ನಡೆಯುತ್ತಲೇ ಇದೆ. ಆದರೆ ಚಂದ್ರನ ಮೇಲೆ ನಿರ್ಮಾಣಕ್ಕಾಗಿ ಮೇಲ್ಮೈ ಮೇಲೆ ಲಭ್ಯವಾಗುವ ವಸ್ತುಗಳನ್ನು ಮಾತ್ರ ಬಳಕೆ ಮಾಡುವ ಸಾಧ್ಯತೆಯಿರುವುದರಿಂದ ಭೂಮಿಯಿಂದ ನಿರ್ಮಾಣಕ್ಕೆ ವಸ್ತುಗಳನ್ನು ಪೂರೈಸುವದು ಸುಲಭದ ವಿಷಯವಲ್ಲ, ಇಂತಹ ಸಂದರ್ಭದಲ್ಲಿ ಚಂದ್ರನಲ್ಲಿ ನಿರ್ಮಾಣಕ್ಕೆ ಕಾಂಕ್ರೀಟ್ ತಯಾರಿಗೆ ಮಾನವನ ಮೂತ್ರ ಬಳಕೆಯ ವಸ್ತುವಾಗಬಹುದು ಎಂದು ಯುರೋಪ್ ನ ಬಾಹ್ಯಾಕಾಶ ಸಂಸ್ಥೆ ಹೇಳಿದೆ.

*** 10 05 2020 ಮೇ9:ಮಹಾರಾಜರಾಣಾ ಪ್ರತಾಪ್‌ಸಿಂಗ್ I ರಜನ್ಮದಿನಾಚರಣೆ**




"ಮಹಾರಾಣ" ಎಂದು ಜನಪ್ರಿಯವಾಗಿ ಕರೆಯಲ್ಪಡುತ್ತಿದ್ದ ಮಹಾರಾಣಾ ಪ್ರತಾಪ್ ಸಿಂಗ್ ಅವರು ಮೇವಾರ್ ರಾಜ್ಯದ (ಈಗಿನ ರಾಜಸ್ಥಾನ) 13 ನೇ ರಾಜರಾಗಿ ಆಡಳಿತ ನಡೆಸಿದ್ದರು. ಇದೆ ಮೇ 09 ರಂದು ಮಹಾರಾಣಾ ಅವರ ಜನ್ಮ ದಿನಾಚರಣೆ ಆಚರಿಸಲಾಯಿತು. ಮಹಾರಾಣಾ ಅವರು 1540 ರ ಮೇ 9 ರಂದು ಜನಿಸಿದ್ದರು. ರಾಣಾ ಮತ್ತು ಮೊಘಲರು : ಮಹಾರಾಣಾ ಪ್ರತಾಪ್ ಸಿಂಗ್ ರು ಹಲ್ದಿಘಾಟಿ ಕದನ ಸೇರಿ ಹಲವು ಕದನಗಳಲ್ಲಿ ಮೊಘಲರ ವಿರುದ್ಧ ಹೋರಾಡಿದ್ದಾರೆ.

### * 10 05 2020 AIIB ಭಾರತಕ್ಕೆ 500 ಮಿಲಿಯನ್ USD ನೀಡಲು ಅನುಮೋದನೆ

ASIAN INFRASTRUCTURE INVESTMENT BANK

ಎಐಐಬಿ (ಏಷ್ಯನ್ ಇನ್ಫ್ರಾಸ್ಟ್ರಕ್ಚರ್ ಇನ್ವೆಸ್ಟ್ಮೆಂಟ್ ಬ್ಯಾಂಕ್) ಭಾರತಕ್ಕೆ ಕೋರೋಣ ವೈರಸ್ ವಿರುದ್ಧ ಹೋರಾಡಲು ಸುಮಾರು 500 ಮಿಲಿಯನ್ ಅಮೆರಿಕನ್ ಡಾಲರು ಮೊತ್ತದಷ್ಟು ಹಣವನ್ನು ನೀಡಲುಅನುಮೋದನೆನೀಡಿದೆ. AIIB ನೀಡುವ ಈ ಹಣವನ್ನು ಕೋರೋಣ ಸೋಂಕಿನ ವಿರುದ್ಧ ಹೋರಾಟದ ಭಾಗವಾಗಿ ತುರ್ತು ಚಿಕಿತ್ಸೆ, ಆರೋಗ್ಯ ವ್ಯವಸ್ಥೆಗಳ ಸುಧಾರಣೆ ಸೇರಿದಂತೆ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ಸಹಯೋಗದೊಂದಿಗೆ ನಡೆಸುತ್ತಿರುವ ಸಂಶೋಧನೆಗಳನ್ನು ಉತ್ತೇಜಿಸಲು ಈ ಹಣವನ್ನು ಬಳಸಲಾಗುತ್ತದೆ.

### * 11 05 2020 ಪ್ರಧಾನಿ ಸಂಶೋಧನಾ ಫೆಲೋಶಿಪ್ ಯೋಜನೆಗೆ (PMRAF) ತಿದ್ದುಪಡಿ





ಭಾರತ ಸರ್ಕಾರದ ಕೇಂದ್ರ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯವು ಇತ್ತೀಚೆಗೆ ಪ್ರಧಾನಿ ಸಂಶೋಧನಾ ಫೆಲೋಶಿಪ್ ಯೋಜನೆಗೆ ವಿವಿಧ ತಿದ್ದುಪಡಿಗಳನ್ನು ಮಾಡಿ ಘೋಷಿಸಿದೆ. ಕೇಂದ್ರ ಸರ್ಕಾರದ ಈ ಯೋಜನೆಯು, ಸಂಶೋಧನೆಗಳನ್ನು ಉತ್ತೇಜಿಸಲು ಸಹಕಾರಿಯಾಗಿದೆ. ಅಲ್ಲದೆ, "ಸಂಶೋಧನೆ ಮತ್ತು ಇನ್ನೋವೇಶನ್ ವಿಭಾಗ" ಎಂಬ ಪ್ರತ್ಯೇಕವಾದ ವಿಭಾಗವನ್ನು ಆರಂಭಿಸಿದೆ. ನೂತನ ತಿದ್ದುಪಡಿಯ ಅನ್ವಯ 2020 21 ನೇ ಸಾಲಿನಲ್ಲಿ ಕೇಂದ್ರ ಸಂಸ್ಥೆಗಳನ್ನು ಹೊರತುಪಡಿಸಿ (IISC, NIT, IIT, IIIT) ಇತರೆ ಯಾವುದೇ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಗೇಟ್ ಪರೀಕ್ಷೆಯ ಅಂಕಗಳು ಕಡ್ಡಾಯವಾಗಿರುತ್ತವೆ.

* PMRAF ಯೋಜನೆ: ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಸಂಶೋಧನೆಯ ಗುಣಮಟ್ಟವನ್ನು ಸುಧಾರಿಸಲು ಈ ಯೋಜನೆಯನ್ನು ರೂಪಿಸಲಾಗಿದೆ. ಅಲ್ಲದೆ, ಸಂಶೋಧನೆಯಲ್ಲಿನ ಉತ್ತಮ ಪ್ರತಿಭೆಗಳನ್ನು ಆಕರ್ಷಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

# Current affairs of May 2020 from KPSC Vaani

*** 11 05 2020 ಮೇ9: ವಿಶ್ವವಲಸೆಹಕ್ಕಿದಿನ**




ಪ್ರತಿ ವರ್ಷ, ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ(UNEP) ಅಡಿಯಲ್ಲಿ ಪ್ರತಿವರ್ಷ ದಿನಾಂಕ ಮೇ 9 ರಂದು ವಿಶ್ವ ವಲಸೆ ಹಕ್ಕಿಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಇದು ಆಚರಣೆಯು ವಾರ್ಷಿಕ ಅಭಿಯಾನವಾಗಿದ್ದು, ಈ ಆಚರಣೆಯಿಂದ ವಲಸೆ ಹಕ್ಕಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ಸಂರಕ್ಷಿಸುವ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ನೆರವಾಗುತ್ತದೆ. ಘೋಷವಾಕ್ಯ : ನಮ್ಮ ಜಗತ್ತನ್ನು ಪಕ್ಷಿಗಳು ಸಂಪರ್ಕಿಸುತ್ತವೆ (Birds Connect our World)

* ವಿಶ್ವ ವಲಸೆ ಹಕ್ಕಿಗಳದಿನವನ್ನು ಮೊದಲಬಾರಿಗೆ2006ರಲ್ಲಿ ಆಚರಿಸಲಾಯಿತು.

*** 11 05 2020 ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(DRDO) ದಿಂದ ವೈರಸ್ ನಾಶಕ್ಕೆ ನೂತನಉಪಕರಣ**



ನವದೆಹಲಿ : ಭಾರತ ಸರ್ಕಾರದ ಅದೀನದಲ್ಲಿ ಕಾರ್ಯನಿರ್ವಹಿಸುವ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಯು ಎಲೆಕ್ಟ್ರಾನಿಕ್ ಉಪಕರಣಗಳು, ಕರೆನ್ಸಿ ನೋಟುಗಳು ಸೇರಿದಂತೆ ವಿವಿಧ ವಸ್ತುಗಳ ಮೇಲಿರುವ ವೈರಾಣುಗಳನ್ನು ನಾಶಪಡಿಸಲು ನೂತನ ಉಪಕರಣವೊಂದನ್ನು ಅಭಿವೃದ್ಧಿಪಡಿಸಿದೆ.

* ಈ ಉಪಕರಣವು ನೇರಳಾತೀತ ಕಿರಣಗಳ ಮೂಲಕ ವೈರಾಣಗಳನ್ನು ನಾಶಪಡಿಸುತ್ತದೆ.

* ಮೊಬೈಲ್ ದೂರವಾಣಿಗಳು, ಐಪ್ಯಾಡ್‌ಗಳು, ಲ್ಯಾಪ್‌ಟಾಪ್‌ಗಳು, ನೋಟುಗಳು, ಚೆಕ್‌ಗಳು, ಚಲನ್‌ಗಳು, ಪಾಸ್‌ಬುಕ್‌ಗಳು, ಪೇಪರ್, ಲಕೋಟೆ ಮುಂತಾದ ವಸ್ತುಗಳಲ್ಲಿರುವ ವೈರಾಣು ನಾಶಕ್ಕೆ ಈ ಉಪಕರಣಬಳಸಬಹುದುಎಂದುಸಚಿವಾಲಯತಿಳಿಸಿದೆ.

*ಹೈದರಾಬಾದ್‌ನಲ್ಲಿರುವDRDOದಸಂಶೋಧನಾ ಕೇಂದ್ರ ಇದನ್ನು ಅಭಿವೃದ್ಧಿಪಡಿಸಿದೆ.


KPSC FDA/SDA ಹುದ್ದೆಗಳ
ತಯಾರಿಗಾಗಿ ಉತ್ತಮ ಪುಸ್ತಕಗಳನ್ನು
ಈಗಲೇ ಖರೀದಿಸಿ
www.kpscvaani.com/books
* ಪುಸ್ತಕಗಳ ಮೇಲೆ 20%ವರೆಗೂ ರಿಯಾಯಿತಿ
* ಎಲ್ಲ ರೀತಿಯ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ
Mob: 8660255805

*** 11 05 2020 ಇತಿಹಾಸತಜ್ಞಹರಿಶಂಕರ್ಇನ್ನಿಲ್ಲ**



ಕೋಲ್ಕತಾ : ಪಶ್ಚಿಮ ಬಂಗಾಳ ಮೂಲದ ಖ್ಯಾತ ಇತಿಹಾಸತಜ್ಞರಾದ ಹರಿ ಶಂಕರ್ ವಾಸುದೇವನ್ ಅವರು ದಿನಾಂಕ 10 ಮೇ 2020 ರ ರವಿವಾರ ದಂದು ಮಾರಕ ಕೋವಿಡ್ 19 ಸೋಂಕಿನಿಂದಾಗಿ ತಮ್ಮ ಕೊನೆಯುಸಿರೆಳೆದರು.

* ರಶ್ಯ ಹಾಗೂ ಮಧ್ಯ ಏಶ್ಯದ ಕುರಿತಾದ ಮುಂಚೂಣಿಯ ಇತಿಹಾಸ ತಜ್ಞರಲ್ಲಿ ವಾಸುದೇವನ್ ಕೂಡಾ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ.

* "ಪ್ರೊಫೆಸರ್ ವಾಸುದೇವನ್ ಅವರು ರಶ್ಯ, ಯುರೋಪ್ ಇತಿಹಾಸ ಹಾಗೂ ಇಂಡೋ ರಶ್ಯನ್ ಬಾಂಧವ್ಯಗಳ ವಿಷಯದಲ್ಲಿ ವಿಶೇಷತಜ್ಞರಾಗಿದ್ದರು.

* 1930 47ರ ಅವಧಿಯಲ್ಲಿ ಭಾರತ ರಶ್ಯ ಬಾಂಧವ್ಯಗಳ ಬಗ್ಗೆ ಹಲವಾರು ವಿಚಾರಸಂಕಿರಣ ಪ್ರಬಂಧಗಳನ್ನು ವಾಸುದೇವನ್ ಮಂಡಿಸಿದ್ದು, ಅವುಗಳನ್ನು ಏಶ್ಯಾಟಿಕ್ ಸೊಸೈಟಿ ಪ್ರಕಟಿಸಿದೆ.

*** 11 05 2020 37 ವಾಯುನೆಲೆಗಳ ಆಧುನೀಕರಕ್ಕೆ ಟಾಟಾ ಪವರ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದರಕ್ಷಣಾಸಚಿವಾಲಯ**

ಭಾರತೀಯ ವಾಯುಪಡೆಯ 37 ವಾಯುನೆಲೆಗಳ ಮೂಲಸೌಕರ್ಯಗಳನ್ನು ನವೀಕರಿಸಲು ರಕ್ಷಣಾ ಸಚಿವಾಲಯವು ಟಾಟಾ ಪವರ್ (SED) ನೊಂದಿಗೆ ಸುಮಾರು 1,200 ಕೋಟಿ ರೂ ಒಪ್ಪಂದಕ್ಕೆ ಸಹಿ ಹಾಕಿತು.

# Current affairs of May 2020 from KPSC Vaani

*** 11 05 2020 ICMR ನ ಪರೀಕ್ಷಾ ಕಿಟ್'ಗಳ ತಲುಪಿಸಲಿರುವ ಭಾರತೀಯ ಅಂಚೆ ಇಲಾಖೆ**




ಭಾರತದ ವಿವಿಧ ಭಾಗಗಳಲ್ಲಿರುವ ಸುಮಾರು 200 ಕೋವಿಡ್ 19 ಪರೀಕ್ಷಾ ಲ್ಯಾಬ್‌ಗಳಿಗೆ COVID 19 ಪರೀಕ್ಷಾ ಕಿಟ್‌ಗಳನ್ನು ತಲುಪಿಸಲು ಭಾರತೀಯ ಅಂಚೆ ಇಲಾಖೆಯು ICMR(ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಐಸಿಎಂಆರ್ ದೇಶಾದ್ಯಂತ ಒಂದು ದಿನಕ್ಕೆ ಸುಮಾರು 1 ಲಕ್ಷ ಕೋವಿಡ್ 19 ಪರೀಕ್ಷೆಗಳನ್ನು ನಡೆಸಲು ಗುರಿ ಹೊಂದಿದ್ದು, ಇದನ್ನು ಸಾಧಿಸಲು ಭಾರತೀಯ ಅಂಚೆ ತನ್ನ 1,50,000 ಅಂಚೆ ಕಚೇರಿಗಳೊಂದಿಗೆ ಸಹಕರಿಸಲಿದೆ. ಭಾರತೀಯ ಅಂಚೆಯು ಈಗಾಗಲೇ ಲಾಕ್ ಡೌನ್ ಸಮಯದಲ್ಲಿ ಆಹಾರ ಮತ್ತು ಪಡಿತರ, ಔಷಧಿಗಳು, ಮೇಲ್‌ಗಳು ಮತ್ತು ಹಣಕಾಸಿನ ನೆರವು ನೀಡುವ ಮೂಲಕ ಜನರಿಗೆ ಸೇವೆ ಸಲ್ಲಿಸುವಲ್ಲಿ ಹೆಚ್ಚಿನ ಕೊಡುಗೆ ನೀಡುತ್ತಿದೆ.

*** 12 05 2020 ಬೆಂಗಳೂರು ವಿಮಾನ ನಿಲ್ದಾಣಕ್ಕೆ 3 ನೇ ಬಾರಿಗೆ ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣಪ್ರಶಸ್ತಿ**



ಭಾರತ ಮತ್ತು ಕೇಂದ್ರ ಏಷ್ಯಾ ಪ್ರದೇಶದಲ್ಲಿನ "ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ ಪ್ರಶಸ್ತಿಗೆ" ಪಾತ್ರವಾಗಿದೆ. ಬೆಂಗಳೂರಿನ ಸಮೀಪದ ದೇವನಹಳ್ಳಿಯಲ್ಲಿ ಕಳೆದ 11 ವರ್ಷಗಳ ಹಿಂದೆ ಆರಂಭವಾದ ಈ ವಿಮಾನ ನಿಲ್ದಾಣಕ್ಕೆ "ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ" ಎಂದು ನಾಮಕರಣ ಮಾಡಲಾಗಿದೆ.

* ನಿಲ್ದಾಣದ ಬಳಕೆದಾರರು ನೀಡುವ ಈ ಪ್ರಶಸ್ತಿಯು ಸತತ ಮೂರನೇ ಬಾರಿಗೆ ಬೆಂಗಳೂರು ವಿಮಾನ ನಿಲ್ದಾಣದ ಪಾಲಾಗಿದೆ. ವಿಮಾನ ಪ್ರಯಾಣಿಕರ ಸಂತೃಪ್ತಿ ಸಮೀಕ್ಷೆ ಆಧರಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

# Current affairs of May 2020 from KPSC Vaani

*** 12 05 2020 ಕೇಂದ್ರ ಸರ್ಕಾರದಿಂದ 14 ರಾಜ್ಯಗಳಿಗೆ 6,195 ಕೋಟಿ ವಿಶೇಷ ಕೊವಿಡ್ ಅನುದಾನಬಿಡುಗಡೆ**



ದೆಹಲಿ : ಭಾರತಕ್ಕೆ ಮಾರಕವಾಗಿರುವ ಕೊರೊನಾ ವೈರಸ್ ವಿರುದ್ಧದ ಹೋರಾಟಕ್ಕಾಗಿ ಕೇಂದ್ರ ಸರ್ಕಾರವು 2ನೇ ಹಂತದಲ್ಲಿ ಒಟ್ಟು 14 ರಾಜ್ಯಗಳಿಗೆ ಸುಮಾರು 6,195 ಕೋಟಿ ರೂಪಾಯಿನಷ್ಟು ಅನುದಾನ ಬಿಡುಗಡೆ ಮಾಡಿದೆ. ವಿವಿಧ ರಾಜ್ಯಗಳಲ್ಲಿ ಕೊವಿಡ್ ವೈರಸ್ ಕಾರಣದಿಂದ ಸಂಕಷ್ಟಕ್ಕೆ ಸಿಲುಕಿದ್ದ ರೈತರು, ಕಾರ್ಮಿಕರು, ಮಹಿಳೆಯರು ಸೇರಿ ವಿವಿಧ ಕ್ಷೇತ್ರಗಳ ಉತ್ತೇಜಿಸಲು ಈ ಮೊದಲು ಮಾರ್ಚ್ ತಿಂಗಳಲ್ಲಿ, ಒಟ್ಟು 1.70 ಲಕ್ಷ ಕೋಟಿ ಅನುದಾನವನ್ನು ಹಣಕಾಸು ಇಲಾಖೆಯಿಂದ ಘೋಷಿಸಲಾಗಿತ್ತು. ಈಗ ಎರಡನೇ ಹಂತದಲ್ಲಿ 14 ರಾಜ್ಯಗಳಿಗೆ 6,195 ಕೋಟಿ ರಿಲೀಸ್ ಮಾಡಿದೆ. ಎರಡನೇ ಹಂತದ ಅನುದಾನದಲ್ಲಿ ಆಂಧ್ರಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಕೇರಳ, ಮಣಿಪುರ್, ಮೇಘಲಾಯ, ಮಿಜಾರೋಂ, ನಾಗಲ್ಯಾಂಡ್, ಪಂಜಾಬ್, ತಮಿಳುನಾಡು, ತ್ರಿಪುರ, ಉತ್ತರಾಖಂಡ, ಪಶ್ಚಿಮ ಬಂಗಾಳ ಹಾಗೂ ಸಿಕ್ಕಿಂ ರಾಜ್ಯಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.


*** 12 05 2020 ಭಾರತದ ಪ್ಯಾರಾ ಅಥ್ಲೀಟ್ `ದೀಪಾ ಮಲಿಕ್' ವೃತ್ತಿ ಬದುಕಿಗೆ ವಿದಾಯ**



ನವದೆಹಲಿ : ಭಾರತದ ಪ್ಯಾರಾ ಅಥ್ಲೀಟ್ ದೀಪಾ ಮಲಿಕ್ ಅವರು ತಮ್ಮ ಕ್ರೀಡಾ ವೃತ್ತಿ ಬದುಕಿಗೆ ವಿದಾಯ ಘೋಷಿಸಿದರು. ಇವರು ಪ್ಯಾರಾಲಿಂಪಿಕ್ ಕಮಿಟಿ ಆಫ್ ಇಂಡಿಯಾದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಷ್ಟ್ರೀಯ ಕ್ರೀಡಾ ನೀತಿ ಮಾರ್ಗದರ್ಶಿಯ ಅನುಸಾರ ಅಥ್ಲೆಟಿಕ್ಸ್ ವೃತ್ತಿ ಬದುಕಿಗೆ ನಿವೃತ್ತಿ ಘೋಷಿಸಿದರು. ದೀಪಾ ಮಲಿಕ್ ಅವರು ಒಲಿಂಪಿಕ್ಸ್ ನಲ್ಲಿ ಪದಕ ಗೆದ್ದ ಭಾರತದ ಮೊದಲ ಪ್ಯಾರಾ ಅಥ್ಲೀಟ್ ಆಗಿದ್ದಾರೆ. ಅಲ್ಲದೆ 58 ರಾಷ್ಟ್ರೀಯ ಹಾಗೂ 23 ಅಂತರಾಷ್ಟ್ರೀಯ ಪದಕಗಳನ್ನು ಜಯಿಸಿದ್ದಾರೆ. 2012 ರಲ್ಲಿ ಅರ್ಜುನ ಹಾಗೂ 2017 ರಲ್ಲಿ ಪದ್ಮಶ್ರೀ ಗೌರವಕ್ಕೆ ಕೂಡ ದೀಪಾ ಮಲಿಕ ಪಾತ್ರರಾಗಿದ್ದಾರೆ.

# Current affairs of May 2020 from KPSC Vaani

*** 12 05 2020 ಕೇಂದ್ರಸರ್ಕಾರದಅಟಲ್ಪಿಂಚಣಿಯೋಜನೆಗೆ5ವರ್ಷ**




ದಿನಾಂಕ ಮೇ 9, 2015 ರಂದು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದಿಂದ ಆರಂಭಿಸಿದ "ಅಟಲ್ ಪಿಂಚಣಿ ಯೋಜನೆ" ಯು ಇದೆ 2020 ರ ಮೇ 09ನೇ ದಿನಾಂಕದಂದು ಯಶಸ್ವೀ 5ವರ್ಷಗಳನ್ನು ಪೂರೈಸಿದೆ. 2020 ರ ಮೇ 9 ರ ವೇಳೆಗೆ ಈ ಯೋಜನೆಯಡಿ ಒಟ್ಟು 2,23,54,028 ಜನರ ದಾಖಲಾತಿ ಆಗಿದೆ. ಅಟಲ್ ಪಿಂಚಣಿ ಯೋಜನೆ : ಈ ಯೋಜನೆಯನ್ನು 18ರಿಂದ 40ವರ್ಷ ವಯಸ್ಸಿನ ಯಾವುದೇ ಭಾರತೀಯ ನಾಗರಿಕರು ಚಂದಾದಾರರಾಗಬಹುದಾಗಿದ್ದು. ನೊಂದಣಿಯಾದವರಿಗೆ ಈ ಯೋಜನೆಯು 60 ವರ್ಷ ದಾಟಿದ ಮೇಲೆ ಕನಿಷ್ಠ 1000 ರಿಂದ 5000 ರೂ.ಗಳ ಪಿಂಚಣಿ ನೀಡಲಾಗುತ್ತದೆ.

* ಈ ಯೋಜನೆಯನ್ನು ಪಿಎಂ ಮೋದಿ ಅವರು 2015 ರಲ್ಲಿ ಕೋಲ್ಕತ್ತಾದಲ್ಲಿ ಪ್ರಾರಂಭಿಸಿದರು.

*** 13 05 2020 "SWASTHVAYU" : ಭಾರತದಿಂದ 36 ದಿನಗಳಲ್ಲಿ ದಾಖಲೆಯ ವೆಂಟಿಲೇಟರ್ಗಳಉತ್ಪಾದನೆ**




ಬೆಂಗಳೂರಿನ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (CSIR) ಮತ್ತು NAL(ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್) ಜಂಟಿಯಾಗಿ "ಸ್ವಸ್ಥವಾಯು" ಎಂಬ ವೆಂಟಿಲೇಟರ್ ಗಳನ್ನೂ ಅಭಿವೃದ್ಧಿಪಡಿಸುತ್ತಿದ್ದು, ಕೇವಲ 36 ದಿನಗಳ ಅವಧಿಯಲ್ಲಿ ಈ ವೆಂಟಿಲೇಟರ್ ಗಳ ದಾಖಲೆ ಪ್ರಮಾಣದಲ್ಲಿ ಉತ್ಪಾದಿಸಲಾಗಿದೆ. ಈ ವೆಂಟಿಲೇಟರಗಳು ಹಲವು ವೈಶಿಷ್ಟ್ಯಗಳನ್ನು ಹೊಂದಿದ್ದು, ಕೋರೋಣ ವಿರುದ್ಧ ಹೋರಾಡಲು ಸಹಕರಿಸಲಿವೆ

# Current affairs of May 2020 from KPSC Vaani



# Current affairs of May 2020 from KPSC Vaani

*** 13 05 2020 "FIR ಆಪ್ಕೆ ದ್ವಾರ್ ಯೋಜನೆ" ಎಂಬ ನೂತನ ಯೋಜನೆ ಆರಂಭಿಸಿದ ಮಧ್ಯಪ್ರದೇಶ**




ಮಧ್ಯಪ್ರದೇಶ ಸರ್ಕಾರವು "ಎಫ್‌ಐಆರ್ ಆಪ್ಕೆ ದ್ವಾರ ಯೋಜನೆ" ಯನ್ನು ಪ್ರಾರಂಭಿಸಿತು. ಮೊದಲಿಗೆ ಪ್ರಾಯೋಗಿಕವಾಗಿ ಒಟ್ಟು 23 ಪೊಲೀಸ್ ಠಾಣೆಗಳಲ್ಲಿ ಈ ಯೋಜನೆಯನ್ನು ಜಾರಿ ಮಾಡಲಾಗಿದ್ದು, ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನು ಒಳಗೊಂಡಿದೆ.

* ಯೋಜನೆಯಡಿ, ಒಬ್ಬ ವ್ಯಕ್ತಿಯು ಪೊಲೀಸ್ ಠಾಣೆಗೆ ದೂರು ನೀಡಲು ಹೋಗಬೇಕಾಗಿಲ್ಲ, ಬದಲಿಗೆ ಜನರಿಂದ ದೂರುಗಳನ್ನು ನೋಂದಾಯಿಸಿಕೊಳ್ಳಲು ಮುಖ್ಯ ಪೇದೆಯು ದೂರುದಾರನ ಮನೆಗೆ ಬಂದು ದೂರು ದಾಖಲಿಸಿಕೊಳ್ಳುವರು.

* ಈ ಯೋಜನೆಯೊಡನೆ ಮಧ್ಯ ಪ್ರದೇಶದ ರಾಜ್ಯದ ಗೃಹ ಸಚಿವರು "ಡಯಲ್ 112" ಎಂಬ ಸಹಾಯವಾಣಿಯನ್ನು ಸಹ ಪ್ರಾರಂಭಿಸಿದರು. ಇದರಿಂದ ತ್ವರಿತ ಆಂಬ್ಯುಲೆನ್ಸ್ ಸೇವೆಗಳು, ಅಗ್ನಿಶಾಮಕ ಸೇವೆ ಸೇರಿ ವಿವಿಧ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

*** 13 05 2020 ಜೂನ್ 1 ರಿಂದ ಪಾರ್ಲಿಮೆಂಟ್ ಕ್ಯಾಂಟೀನ್ ನಲ್ಲಿ ಕೇವಲ ದೇಸಿ ಉತ್ಪನ್ನಗಳ ಮಾರಾಟ**



ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಭಾಷಣದಲ್ಲಿ ಸ್ವದೇಶೀ ಉತ್ಪನ್ನಗಳ ಬಳಸುವಂತೆ ಕರೆ ನೀಡಿದ ಬೆನ್ನಲ್ಲೇ ಹೇಳಿದ್ದರು. ಈ ನಿಟ್ಟಿನಲ್ಲಿ, ಬರುವ 2020 ರ ಜೂನ್ 1 ರಿಂದ ಎಲ್ಲಾ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಕ್ಯಾಂಟೀನ್‌ಗಳಲ್ಲಿ ಸ್ಥಳೀಯ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡಲು ಗೃಹ ಸಚಿವಾಲಯ ನಿರ್ಧರಿಸಿರುವದಾಗಿ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

# Current affairs of May 2020 from KPSC Vaani

*** 13 05 2020 20ಲಕ್ಷಕೋಟಿರೂ.ವಿಶೇಷಹಣಕಾಸುಪ್ಯಾಕೇಜ್‌ಘೋಷಣೆ ಮಾಡಿದಪ್ರಧಾನಿಮೋದಿ**



ನವದೆಹಲಿ: ಕೋವಿಡ್ 19 ಸೋಂಕಿನಿಂದ ಭಾರತದ ಅರ್ಥ ವ್ಯವಸ್ಥೆ ತೀವ್ರ ಸಂಕಷ್ಟ ಅನುಭವಿಸುತ್ತಿರುವ ಹಿನ್ನಲೆ, ಭಾರತದ ಅರ್ಥ ವ್ಯವಸ್ಥೆಗೆ ನವಚೈತನ್ಯ ತುಂಬುವಂತಹ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಕೈಗೊಳ್ಳಲಾದ ಉಪಕ್ರಮಗಳು ಸೇರಿದಂತೆ ಸುಮಾರು ₹20 ಲಕ್ಷ ಕೋಟಿ ಮೊತ್ತದ ಆರ್ಥಿಕ ಪ್ಯಾಕೇಜ್ ನೀಡುವದಾಗಿ ಪ್ರಧಾನಿ ಘೋಷಿಸಿದರು. ಇದರಿಂದಾಗಿ ಭಾರತದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 10ರಷ್ಟಾಗುತ್ತದೆ ಎಂದು ಅವರು ತಿಳಿಸಿದರು.

* ಕಾರ್ಮಿಕರು, ರೈತರು, ಪ್ರಾಮಾಣಿಕ ತೆರಿಗೆ ಪಾವತಿದಾರರು, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳಲ್ಲಿ ತೊಡಗಿಸಿಕೊಂಡಿರುವ ಎಲ್ಲ ಭಾರತೀಯರಿಗೂ ಈ ಪ್ಯಾಕೇಜ್‌ನಲ್ಲಿ ಪಾಲು ಇರುವದಾಗಿ ಪ್ರಧಾನಿ ತಿಳಿಸಿದ್ದಾರೆ.

* ದೇಶವ್ಯಾಪಿ ಹೇರಲಾಗಿರುವ ಮೂರನೇ ಹಂತದ ಲಾಕ್‌ಡೌನ್ ಇದೇ 17ಕ್ಕೆ ಕೊನೆಯಾಗಲಿದೆ. ನಂತರ, ನಾಲ್ಕನೇ ಹಂತದ ದಿಗ್ಬಂಧನ ಆರಂಭವಾಗಲಿದ್ದು, ಇದರ ರೂಪರೇಷಗಳನ್ನು ಶೀಘ್ರದಲ್ಲಿ ತಿಳಿಸುವದಾಗಿ ಅವರು ಇದೆ ವೇಳೆ ತಿಳಿಸಿದರು.

*** 14 05 2020 EPF ಇನ್ನೂ 3 ತಿಂಗಳು ಕೇಂದ್ರವೇ ಪಾವತಿಸುತ್ತದೆ: ನಿರ್ಮಲಾ ಸೀತಾರಾಮನ್**



ನವದೆಹಲಿ: ಕೊವಿಡ್ 19 ರಿಂದ ತೀವ್ರ ಹೊಡೆತಕ್ಕೆ ಒಳಗಾದ ಉದ್ಯಮಗಳನ್ನು ಸಹಜ ಸ್ಥಿತಿಗೆ ಬರಲು ಕೆಲ ಸಮಯ ಬೇಕಾಗುತ್ತದೆ. ಹಾಗಾಗಿ ಅಂಥ ಇಪಿಎಫ್ ಸಂಸ್ಥೆಗಳಿಗೆ ಇನ್ನೂ ಮೂರು ತಿಂಗಳು ಕೇಂದ್ರ ಸರ್ಕಾರದಿಂದ ನೆರವು ನೀಡುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು. ಉದ್ಯಮ ಮತ್ತು ಉದ್ಯೋಗಿಗಳಿಗೆ EPF ಹಣದ ಸಹಕಾರವನ್ನು ಇನ್ನೂ ಮೂರು ತಿಂಗಳು ಅಂದರೆ ಜೂನ್, ಜುಲೈ, ಆಗಸ್ಟ್‌ಗೆ ವಿಸ್ತರಿಸಿಲು ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್‌ನಲ್ಲಿ 2500 ಕೋಟಿ ರೂಪಾಯಿ ಮೀಸಲಿಟ್ಟಿದೆ. ಇದರಿಂದಾಗಿ 3.67ಲಕ್ಷ ಸಂಸ್ಥೆಗಳ 72.22ಲಕ್ಷ ನೌಕರರು ಅನುಕೂಲ ಪಡೆಯಲಿದ್ದಾರೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

# Current affairs of May 2020 from KPSC Vaani



# Current affairs of May 2020 from KPSC Vaani

### * 14 05 2020 ನಿತ್ಯ6ಸಾವಿರಮಕ್ಕಳಸಾವು = ಯುನಿಸೆಫ್ಎಚ್ಚರಿಕೆ



ವಿಶ್ವಸಂಸ್ಥೆ : ಇಡೀ ವಿಶ್ವವನ್ನೇ ವ್ಯಾಪಿಸಿರುವ ಕೋವಿಡ್ ವೈರಸ್‌ನ ಪರಿಣಾಮವಾಗಿ ಬರುವ ಮುಂದಿನ ಆರು ತಿಂಗಳಲ್ಲಿ ನಿತ್ಯ 6,000 ಮಕ್ಕಳು ಸಾವಿಗೀಡಾಗಬಹುದು ಎಂದು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನಿಸೆಫ್ ಎಚ್ಚರಿಸಿದೆ. ಕೋರೋಣ ಸೋಂಕಿನಿಂದ ಜನರ ದೈನಂದಿನ ಆರೋಗ್ಯ ಸೇವೆಯ ಮೇಲೆ ಉಂಟಾಗುವ ದುಷ್ಪರಿಣಾಮಗಳಿಂದಾಗಿ ಈ ಸಾವುಗಳು ಸಂಭವಿಸಲಿವೆ ಹಾಗು ಎರಡನೇ ಜಾಗತಿಕ ಯುದ್ಧದ ಬಳಿಕದ ಅತಿ ದೊಡ್ಡ ದುರಂತ ಇದಾಗಲಿದೆ ಎಂದು ಯುನಿಸೆಫ್ ಹೇಳಿದೆ.

* ಗರ್ಭಿಣಿಯರಿಗೆ ಮತ್ತು ನವಜಾತ ಶಿಶುಗಳಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳು, ಔಷಧಗಳು, ಹಾಗು ಲಸಿಕೆಗಳ ಅಭಾವ, ಸಮರ್ಪಕ ಆರೈಕೆ ಮತ್ತು ಶುಶ್ರೂಷೆಯ ಕೊರತೆಯಿಂದ ಮುಂದಿನ ಆರು ತಿಂಗಳಲ್ಲಿ ಸುಮಾರು 12 ಲಕ್ಷ ಮಕ್ಕಳು ಸಾವಿಗೀಡಾಗಬಹುದು ಎಂಬುದಾಗಿ ಲ್ಯಾನ್ಸೆಟ್ ಗ್ಲೋಬಲ್ ಹೆಲ್ತ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಹಾಪ್‌ಕಿನ್ಸ್ ಬ್ಲೂಮ್‌ರಾಂಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

### * 14 05 2020 ಬ್ರಿಕ್ಸ್ಬ್ಯಾಂಕಿನಿಂದಭಾರತಕ್ಕೆ1ಬಿಲಿಯನ್‌ಡಾಲರ್‌ನೆರವು




ಬ್ರಿಕ್ಸ್ ರಾಷ್ಟ್ರಗಳ ನ್ಯೂ ಡೆವೆಲಪ್ ಮೆಂಟ್ ಬ್ಯಾಂಕ್(NDB) ಭಾರತಕ್ಕೆ ಕೊರೊನಾವೈರಸ್ ವಿರುದ್ಧ ಹೋರಾಡಲು 1 ಶತಕೋಟಿ ಡಾಲರ್ (USD)ಅಂದರೆ ಸುಮಾರು 7,549ಕೋಟಿ ರುಪಾಯಿಗಳ ಆರ್ಥಿಕ ನೆರವು ಘೋಷಿಸಿದೆ.

* ಶಾಂಘೈ ನಲ್ಲಿ ತನ್ನ ಕೇಂದ್ರ ಕಚೇರಿ ಹೊಂದಿರುವ ನ್ಯೂ ಡೆವೆಲಪ್ ಮೆಂಟ್ ಬ್ಯಾಂಕ್ ನ್ನು ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ಒಟ್ಟಾಗಿ 2014ರಲ್ಲಿ ಸ್ಥಾಪಿಸಿದ್ದವು. ಈ ಬ್ಯಾಂಕ್ ನ ಮುಖ್ಯಸ್ಥರಾಗಿ ಭಾರತದ ಹಿರಿಯ ಬ್ಯಾಂಕ್ ಅಧಿಕಾರಿ ಕೆ ವಿ ಕಾಮತ್ ಸೇವೆ ಸಲ್ಲಿಸುತ್ತಿದ್ದಾರೆ.

# Current affairs of May 2020 from KPSC Vaani

### * 14 05 2020 ಪಿಎಂ ಕಿಸಾನ್‌ಯೋಜನೆ:18,517ಕೋಟಿರೂಬಿಡುಗಡೆ



ಕೇಂದ್ರ ಕೃಷಿ ಸಚಿವಾಲಯದಿಂದ ಪಿಎಂ ಕಿಸಾನ್ ಯೋಜನೆಯಡಿ ಒಟ್ಟು 18,517 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, ಇದರಿಂದಾಗಿ ಒಟ್ಟು 9.25ಕೋಟಿ ಕುಟುಂಬಗಳಿಗೆ ನೆರವಾಗಲಿದೆ.


* ಲಾಕ್ ಡೌನ್ ದಿನಗಳಲ್ಲಿ ಪ್ರಧಾನ್ ಮಂತ್ರಿ ಗರಿಬ್ ಕಲ್ಯಾಣ್ ಅನ್ ಯೋಜನೆಯ ಭಾಗವಾಗಿ ಪಿಎಂ ಕಿಸಾನ್ ಯೋಜನೆಗೆ ಭಾರತ ಸರ್ಕಾರ ಇದುವರೆಗೆ 18,517ಕೋಟಿ ರೂ. ಹಣವನ್ನು ಬಿಡುಗಡೆ ಮಾಡಲಾಗಿದೆ.
* ಪಿಎಂ ಕಿಸಾನ್ ಯೋಜನೆ : ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು 2019 ರ ಫೆಬ್ರವರಿ 24 ರಂದು ಆರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ ಎಲ್ಲ ಸಣ್ಣ ರೈತರಿಗೆ ಒಟ್ಟು ಮೂರು ಕಂತುಗಳಲ್ಲಿ ಪ್ರತಿ ವರ್ಷಕ್ಕೆ 6,000 ರೂ. ನಗದನ್ನು ನೇರವಾಗಿ ರೈತರ ಖಾತೆಗಳಿಗೆ ಜಮಾ ಮಾಡಲಾಗುವದು.

### * 14 05 2020 ಶಾಂಘೈಸಹಕಾರಸಂಸ್ಥೆಸಭೆಯಲ್ಲಿಭಾಗವಹಿಸಿದಭಾರತ




SCO (ಶಾಂಘೈ ಸಹಕಾರ ಸಂಸ್ಥೆ)ಯಾ ವಿದೇಶಾಂಗ ಸಚಿವರು ನಡೆಸಿದ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಸಭೆಯಲ್ಲಿ ಭಾರತದಿಂದ ವಿದೇಶಾಂಗ ವ್ಯವಹಾರಗಳ ಸಚಿವ ಶ್ರೀ ಎಸ್ ಜೈಶಂಕರ್ ಭಾಗವಹಿಸಿದರು. ಈ ಸಭೆಯಲ್ಲಿ COVID 19 ಬಿಕ್ಕಟ್ಟು ಮತ್ತು ಅದರಿಂದ ಉಂಟಾದ ಆರ್ಥಿಕ ಪರಿಣಾಮಗಳು ಮತ್ತು ಅದನ್ನು ಹೇಗೆ ನಿಭಾಯಿಸುವುದು ಎಂಬುದರ ಬಗ್ಗೆ ಚರ್ಚೆ ನಡೆಸಲಾಯಿತು. ಅಫ್ಘಾನಿಸ್ತಾನದ ಪರಿಸ್ಥಿತಿ. 2 ನೇ ಮಹಾಯುದ್ಧದ ಮುಂಬರುವ 75 ನೇ ವಾರ್ಷಿಕೋತ್ಸವ ಮತ್ತು ವಿಶ್ವಸಂಸ್ಥೆಯ 75 ನೇ ವಾರ್ಷಿಕೋತ್ಸವ ಸೇರಿ ವಿವಿಧ ವಿಷಯಗಳ ಕುರಿತು ಸಚಿವರು ಚರ್ಚಿಸಿದರು.

# Current affairs of May 2020 from KPSC Vaani



# Current affairs of May 2020 from KPSC Vaani

### * 15 05 2020 ವಿವಾದಿತಎಪಿಎಂಸಿತಿದ್ದುಪಡಿಕಾಯ್ದೆಜಾರಿಗೆಸಂಪುಟಅಸ್ತು



ಬೆಂಗಳೂರು : APMC ಕಾಯ್ದೆಗೆ ತಿದ್ದುಪಡಿ ತರಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಮೂಲಕ ಸ್ಥಳೀಯ ಮಾರುಕಟ್ಟೆ ಸಮಿತಿಗಳ ಅಧಿಕಾರ ಕಡಿತಗೊಳಿಸಿ, ಖಾಸಗಿ ಕೃಷಿ ಉತ್ಪನ್ನ ಮಾರುಕಟ್ಟೆಗಳ ಸ್ಥಾಪನೆ ಮತ್ತು ಖಾಸಗಿ ಕಂಪೆನಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವದು ಈ ತಿದ್ದುಪಡಿಯ ಉದ್ದೇಶವಾಗಿದೆ. ಭಾರತ ಸರಕಾರದ 2017 ಮಾದರಿ ಕೃಷಿ ಉತ್ಪನ್ನ ಮತ್ತು ಜೀವನೋಪಾಯ ಮಾರುಕಟ್ಟೆ ಕಾಯ್ದೆಯ ಅಡಿಯಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂ ತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧ್ಯಾದೇಶ2020ಕ್ಕೆರಾಜ್ಯಸಚಿವಸಂಪುಟ14 ಮೇ (ಗುರುವಾರ) ರಂದು ಅನುಮೋದನೆ ನೀಡಿದೆ.

* ಏನೇನು ತಿದ್ದುಪಡಿ? : ನೂತನ ತಿದ್ದುಪಡಿಯಲ್ಲಿ ಸಮಿತಿಯ ಅಧಿಕಾರ ಕೇವಲ ಮಾರುಕಟ್ಟೆ ಒಳಗೆ ಮಾತ್ರ. ಆದರೆ ರಾಜ್ಯ ಮಟ್ಟದ ನಿರ್ದೇಶಕ ಮಂಡಳಿಗೆ ಪೂರ್ಣ ಪ್ರಮಾಣದ ಅಧಿಕಾರ ಇರುತ್ತದೆ. ಇದು ಎಲ್ಲವನ್ನೂ ನಿಯಂತ್ರಣ ಮಾಡಬಹುದಾಗಿದೆ.
* ಖಾಸಗಿ ಮಾರುಕಟ್ಟೆಗಳ ಸ್ಥಾಪನೆ ಮತ್ತು ಖಾಸಗಿ ಸಂಸ್ಥೆಗಳ ಪ್ರವೇಶಕ್ಕೆ ತಿದ್ದುಪಡಿ ಅವಕಾಶ ಕಲ್ಪಿಸಿದೆ.


### * 15 05 2020 ಮಂಜೇಶ್ವರ ಈಗ 'ಕನ್ನಡ ಭಾಷಾ ಅಲ್ಪಸಂಖ್ಯಾತ ಪ್ರದೇಶ' : ಕೇರಳ ಸರ್ಕಾರದ ಆದೇಶ




ಮಂಗಳೂರು: ಕರ್ನಾಟಕದೊಂದಿಗೆ ಗಡಿ ಹಂಚಿಕೊಂಡಿರುವ ಕೇರಳದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲ್ಲೂಕು ಪ್ರದೇಶವನ್ನು 'ಕನ್ನಡ ಭಾಷೆಯ ಅಲ್ಪಸಂಖ್ಯಾತ ಪ್ರದೇಶ' ಎಂಬುದಾಗಿ ಕೇರಳ ಸರ್ಕಾರ ಘೋಷಣೆ ಮಾಡಿದೆ. ಈ ಮೂಲಕ ಈ ಭಾಗದ ಕೆಲ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದ ಕನ್ನಡಿಗರ ಬಹುದಿನದ ಬೇಡಿಕೆ ಈಡೇರಿದಂತಾಗಿದೆ. ಈ ಮೂಲಕ ಮಂಜೇಶ್ವರ ತಾಲ್ಲೂಕಿಗೆ ಕನ್ನಡ ಭಾಷೆಯ ಅಲ್ಪಸಂಖ್ಯಾತ ಪ್ರದೇಶ ಸ್ಥಾನಮಾನವನ್ನು ನೀಡಿ ಕೇರಳ ಸರ್ಕಾರ ಆದೇಶ ಹೊರಡಿಸಿದೆ.

# Current affairs of May 2020 from KPSC Vaani

*** 15 05 2020 ಪದ್ಮಭೂಷಣಪುರಸ್ಕೃತಪ್ರೊ.ಅನೀಸುಝ್ಝುಮಾನ್ನಿಧನ**



ಡಾಕಾ : ತಮ್ಮ ಅಧ್ಯಯನ ಹಾಗೂ ಬರಹಗಳ ಮೂಲಕ ಬಾಂಗ್ಲಾ ಭಾಷೆಯ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕೊಡುಗೆ ಸಲ್ಲಿಸಿರುವ ಅನೀಸುಝ್ಝುಮಾನ್ ಅವರು ಮೂತ್ರಪಿಂಡ ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಯಿಂದ ತಮ್ಮ 83 ವಯಸ್ಸಿನಲ್ಲಿ ವಿಧಿವಶರಾದರು. ಇವರು ಬಾಂಗ್ಲಾ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿದ ಭಾರತ ಸರಕಾವು ಪದ್ಮ ಭೂಷಣ ಪುರಸ್ಕಾರ ನೀಡಿ ಗೌರವಿಸಿತ್ತು.

*** 15 05 2020 ಕೇಂದ್ರಸರ್ಕಾರಿನೌಕರರಿಗೆ15ದಿನವರ್ಕ್‌ಫ್ರಂಹೋಮ್‌ಅವಕಾಶ**
**= ಹೊಸ ಕರಡು ಸಿದ್ಧತೆ**




ನವದೆಹಲಿ : ದೇಶದಲ್ಲಿ ಹೆಚ್ಚುತ್ತಿರುವ ಕೋರೋಣ ವೈರಸ್ ನಿಯಂತ್ರಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ಕೈಗೊಳ್ಳಲು ಮುಂದಾಗಿರುವ ನಡುವೆಯೇ ಕೇಂದ್ರ ಸರ್ಕಾರಿ ನೌಕರರಿಗೆ ಇನ್ನುಂದೆ ವರ್ಷದಲ್ಲಿ 15 ದಿನ ಮನೆಯಿಂದಲೇ ಕಚೇರಿ ಕೆಲಸ ಮಾಡುವ (ವರ್ಕ್ ಫ್ರಂ ಹೋಮ್) ಸೌಲಭ್ಯದ ಕುರಿತು ಕೇಂದ್ರ ಸರ್ಕಾರ ಕರಡು ರೂಪಿಸುತ್ತಿರುವುದಾಗಿ ತಿಳಿದು ಬಂದಿದೆ. ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ದೂರುಗಳ ಇಲಾಖೆ ಈ ಕುರಿತು ಕರಡು ಪ್ರಸ್ತಾಪವನ್ನಿಟ್ಟಿತ್ತು. ಈ ನೂತನ ಕ್ರಮದಿಂದ ದೇಶದಲ್ಲಿ ಇರುವ ಸುಮಾರು 48.34 ಲಕ್ಷ ಕೇಂದ್ರ ಸರ್ಕಾರಿ ನೌಕರರಿಗೆ 15 ದಿನ ವರ್ಕ್ ಫ್ರಂ ಹೋಮ್ ಸೌಲಭ್ಯ ದೊರೆಯಲಿದೆ.

# Current affairs of May 2020 from KPSC Vaani

*** 15 05 2020 ಮುದ್ರಾಶಿಶುಸಾಲಯೋಜನೆ : 12ತಿಂಗಳು ಬಡ್ಡಿವಿನಾಯಿತಿ**




ಕೊರೊನಾ ವೈರಸ್ ಕಾರಣಕ್ಕೆ ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ್ ಭಾರತ್" ಯೋಜನೆಯ 2 ನೇ ಭಾಗದ ಬಗ್ಗೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಣ್ಣ ಪ್ರಮಾಣದ ವ್ಯಾಪಾರಿಗಳಿಗಾಗಿ ರೂಪಿಸಿರುವ ಕೆಲವು ಕ್ರಮಗಳ ಬಗ್ಗೆ ತಿಳಿಸಿದರು. ಮುದ್ರಾ ಯೋಜನೆ ಅಡಿ ಸಾಲ ಪಡೆದ ಸಣ್ಣ ವ್ಯವಹಾರ ನಡೆಸುವವರಿಗೆ ದೇಶದಲ್ಲಿ ವಿಧಿಸಿರುವ ಲಾಕ್ ಡೌನ್ ಇಂದಾಗಿ ತೀವ್ರ ತೊಂದರೆಯಾಗಿರುವದ ಮನಗಂಡು ಕೇಂದ್ರ ಸರ್ಕಾರವು ಸದ್ಯಕ್ಕೆ ಮುದ್ರಾ ಶಿಶು ಸಾಲವಾಗಿ 1.62 ಲಕ್ಷ ಕೋಟಿ ರುಪಾಯಿ ವಿತರಿಸರಿಸಿದೆ. ಈ ಯೋಜನೆಯಡಿ ಸಾಲ ಪಡೆದು ಯಾರು ಪ್ರಾಮಾಣಿಕವಾಗಿ ಮರುಪಾವತಿ ಮಾಡಿರುವರೋ ಅವರ 12 ತಿಂಗಳ ಬಡ್ಡಿಯಲ್ಲಿ ಶೇಕಡಾ 2 ರಷ್ಟು ವಿನಾಯಿತಿ ನೀಡಲಾಗಿದೆ. ಇದರಿಂದಾಗಿ ಸರ್ಕಾರಕ್ಕೆ ಒಟ್ಟಾರೆ 1500 ಕೋಟಿ ರುಪಾಯಿಯಷ್ಟು ಮೊತ್ತ ಹೊರೆಯಾಗಲಿದೆ
* ಮುದ್ರಾ ಯೋಜನೆ : ಈ ಮುದ್ರಾ ಶಿಶು ಯೋಜನೆಯಲ್ಲಿ ವರ್ತಕರು, ವ್ಯಾಪಾರಿಗಳಿಗೆ ಗರಿಷ್ಠ 50 ಸಾವಿರ ರುಪಾಯಿ ತನಕ ಸಾಲನೀಡಲಾಗುತ್ತದೆ.

*** 16 05 2020 ಭೂಮಿಯಸಮೀಪಕ್ಕೆ "ಸ್ವಾನ್" ಹೆಸರಿನಧೂಮಕೇತು**



1980ರ ದಶಕದಲ್ಲಿ ಹ್ಯಾಲಿ ಧೂಮಕೇತುವನ್ನು ಜನರು ವೀಕ್ಷಿಸಿದ್ದರು, ಆದರೆ ಮತ್ತೆ ಅದನ್ನು ನೋಡಲು 2061 ರ ವರೆಗೆ ಕಾಯಬೇಕು, ಆದರೆ ಈಗ "ಸ್ವಾನ್" ಹೆಸರಿನ ಧೂಮಕೇತು ಭೂಮಿಯ ಸಮೀದಲ್ಲಿಕಾಣಿಸಿಕೊಳ್ಳಲಿದ್ದುಅದನ್ನುನೋಡುವಅವಕಾಶಒದಗಿಬಂದಿದೆ.
*ಈಧೂಮಕೇತುವುಈ ವರ್ಷ ಮೇ 28 ರಂದು ಸೂರ್ಯನ ಅತೀ ಸಮೀಪಕ್ಕೆ ಬಂದು ಹೋಗಲಿದೆ.
*ಈ ಧೂಮಕೇತು ಸೂರ್ಯೋದಯಕ್ಕೆ ಮುನ್ನ ಒಂದೂವರೆ ತಾಸು ಕಾಣಿಸುತ್ತದೆ. ಮೇ 20ರಂದು ಈ ಧೂಮಕೇತುವನ್ನು ನೋಡಲುಒಳ್ಳೆಯದಿನ, ಮತ್ತುಧೂಮಕೇತುಮೇ22ರತನಕಇದೇಹೊಳಪಿನಲ್ಲಿಉಳಿಯುತ್ತದೆ.

# Current affairs of May 2020 from KPSC Vaani

*** 16 05 2020 ವಿಶ್ವಬ್ಯಾಂಕ್‌ನಿಂದ 1 ಶತಕೋಟಿ ಡಾಲರ್ ಸಾಮಾಜಿಕ ಸುರಕ್ಷತಾ ಪ್ಯಾಕೇಜ್ ಪಡೆದ ಭಾರತ**

ನವದೆಹಲಿ: ಕೊರೋನ ವೈರಸ್ ವಿರುದ್ಧ ಹೋರಾಡಲು ದೇಶದಲ್ಲಿ ವಿಧಿಸಿರುವ ಲಾಕ್ ಡೌನ್ ನಿಂದಾಗಿ ತೀವ್ರಸಂಕಷ್ಟಕ್ಕೆ ಒಳಗಾಗಿರುವ ಬಡ ಹಾಗೂ ದುರ್ಬಲಕುಟುಂಬಗಳಿಗೆಆರ್ಥಿಕಹಾಗುಸಾಮಾಜಿಕನೆರವನ್ನು ನೀಡುವಭಾರತದಪ್ರಯತ್ನಗಳಿಗೆಬೆಂಬಲವಾಗಿವಿಶ್ವಬ್ಯಾಂಕ್1ಶತಕೋಟಿಡಾಲರ್( ಸುಮಾರು 7000 ಕೋಟಿ ರೂಪಾಯಿ)ಗಳ ನೆರವನ್ನು ಘೋಷಿಸಿದೆ. ವಿಶ್ವ ಬ್ಯಾಂಕ್ ಭಾರತಕ್ಕೆ ಎರಡು ಹಂತಗಳಲ್ಲಿ ಹಣಕಾಸು ನೆರವು ನೀಡುವುದಾಗಿ ತಿಳಿಸಿದೆ. 2020 21ನೇ ಸಾಲಿನ ಹಣಕಾಸು ವರ್ಷಕ್ಕಾಗಿ ತಕ್ಷಣವೇ 750ದಶಲಕ್ಷ ಡಾಲರ್ ಮತ್ತು ಎರಡನೆ ಕಂತಿನಲ್ಲಿ 2021 22ನೇಹಣಕಾಸುವರ್ಷಕ್ಕಾಗಿ250ದಶಲಕ್ಷ ಡಾಲರ್‌ಗಳನ್ನು ಒದಗಿಸಲಾಗುವುದು ಎಂದು ವಿಶ್ವಬ್ಯಾಂಕ್ ತಿಳಿಸಿದೆ.

*** 16 05 2020 ಕೃಷಿ ಮೂಲಸೌಕರ್ಯಕ್ಕಾಗಿ 1 ಲಕ್ಷ ಕೋಟಿ ರೂ ಘೋಷಣೆಮಾಡಿದ : ನಿರ್ಮಲಾ ಸೀತಾರಾಮನ್**




ನವದೆಹಲಿ : ಭಾರತ ಸರ್ಕಾರ ಕೃಷಿ ಮೂಲಸೌಕರ್ಯ ಯೋಜನೆಗಳಿಗಾಗಿ 1 ಲಕ್ಷ ಕೋಟಿ ರೂಪಾಯಿ ಘೋಷಣೆ ಮಾಡಿದೆ. ಈ ವಿಷಯವನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಂಚಿಕೊಂಡಿದ್ದಾರೆ. ಪ್ರದಾನ ಮಂತ್ರಿ ಘೋಷಿಸಿದ ಆರ್ಥಿಕ ಪ್ಯಾಕೇಜ್‌ನ ಮೂರನೇ ಹಂತದ ವಿವರಣೆಯನ್ನು ನೀಡಿದ ನಿರ್ಮಲಾ ಸೀತಾರಾಮನ್ ಅವರು ಪ್ರಮುಖವಾಗಿ ಕೃಷಿ ವಲಯದ ಯೋಜನೆಗಳಿಗೆ ಧನಸಹಾಯ ನೀಡಲು 1,00,000ಕೋಟಿರೂ.ಗಳಹಣಕಾಸುಸೌಲಭ್ಯವನ್ನುಒದಗಿಸಲಾಗುವುದುಎಂದುಮಾಹಿತಿನೀಡಿದರು.

KSP PSI/PC ಹುದ್ದೆಗಳ ತಯಾರಿಗಾಗಿ ಉತ್ತಮ ಪುಸ್ತಕಗಳನ್ನು ಈಗಲೇ ಖರೀದಿಸಿ




www.kpscvaani.com/books

* ಪ್ರತಿ ಪುಸ್ತಕದ ಮೇಲೆ ಉತ್ತಮ ರಿಯಾಯಿತಿ
* ಪ್ರಸಿದ್ಧ ಲೇಖಕರ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ

# Current affairs of May 2020 from KPSC Vaani

*** 16 05 2020 ಇತ್ತೀಚೆಗೆ ಸುದ್ದಿಯಲ್ಲಿ "Event Bolt Malware" ಕುರಿತ ಮಾಹಿತಿ**



ಭಾರತದ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (CERT) "Event Bolt" ಎಂಬ ಹೊಸ ಮಾಲ್ವೇರ್ ಕುರಿತ ಎಚ್ಚರಿಕೆ ನೀಡಿದ್ದು. ಈ ಮಾಲ್‌ವೇರ್ ಆಂಡ್ರಾಯ್ಡ್ ಮೊಬೈಲ್ ಫೋನ್'ಗಳ ಬಳಕೆದಾರರಿಂದ ವೈಯಕ್ತಿಕ ಹಣಕಾಸು ಮಾಹಿತಿಯನ್ನು ಕದಿಯುತ್ತದೆ CERT ತಿಳಿಸಿದೆ. ಈ "EventBolt" ಮಾಲ್ವೇರ್ ಟ್ರೋಜನ್ ನ್ನು ಹರಡುತ್ತದೆ, ಮತ್ತು ಕಂಪ್ಯೂಟರ್ ಅಥವಾ ಮೊಬೈಲ್ಫೋ ಫೋನಗಳ ಆಪರೇಟಿಂಗ್ ಸಿಸ್ಟಮ್ ಮೇಲೆ ರಹಸ್ಯವಾಗಿ ಆಕ್ರಮಣ ಮಾಡುವ ಮೂಲಕ ಬಳಕೆದಾರರ ಬ್ಯಾಂಕಿಂಗ್ ಸೇರಿ ಹಲವು ಮಾಹಿತಿಯನ್ನು ಕದಿಯುತ್ತದೆ.

* ಪ್ರಸ್ತುತ, ಮಾಲ್ವೇರ್ 200 ಕ್ಕೂ ಹೆಚ್ಚು ವಿವಿಧ ಹಣಕಾಸು ಅಪ್ಲಿಕೇಶನ್‌ಗಳನ್ನು ಗುರಿಯಾಗಿಸುವ ಸಾಮರ್ಥ್ಯ ಹೊಂದಿದೆ.

* ಈ ಮಾಲ್ವೇರ್ ಈಗಾಗಲೇ ಕ್ರಿಪ್ಟೋ ಕರೆನ್ಸಿ ವ್ಯಾಲೆಟ್, ಯುರೋಪ್ ಮತ್ತು ಯುಎಸ್ನಲ್ಲಿನ ಬ್ಯಾಂಕ್ ಖಾತೆಗಳನ್ನು ಲೂಟಿ ಮಾಡಿದೆ.

*** 16 05 2020 "45ನೇ ರಾಜ್ಯ ದಿನ" ಆಚರಿಸಿದ ಸಿಕ್ಕಿಂ**




ಪ್ರತಿ ವರ್ಷ ಮೇ 16, 2020 ರಂದು ಸಿಕ್ಕಿಂ ರಾಜ್ಯವು ತನ್ನ ರಾಜ್ಯತ್ವ ದಿನವನ್ನು ಆಚರಿಸುತ್ತದೆ. 1975 ರಲ್ಲಿ ಈ ದಿನ ರಾಜ್ಯ ಅಸ್ತಿತ್ವಕ್ಕೆ ಬಂದಂತೆ ಪ್ರತಿ ವರ್ಷ ಸಿಕ್ಕಿಂ ತನ್ನ ರಾಜ್ಯ ದಿನವನ್ನು ಮೇ 16ರಂದು ಆಚರಿಸುತ್ತದೆ. ಇತಿಹಾಸ :1947ರಲ್ಲಿ ಭಾರತ ಸ್ವತಂತ್ರವಾದ ಹಲವು ವರ್ಷಗಳ ನಂತರ 1975 ರಲ್ಲಿ ಸಿಕ್ಕಿಂ ಭಾರತದ ಗಣರಾಜ್ಯದೊಂದಿಗೆ ಸೇರಿತು. ಸಿಕ್ಕಿಂ ರಾಜ್ಯವು ಭಾರತ ಗಣರಾಜ್ಯಕ್ಕೆ ಸೇರ್ಪಡೆಯಾದ 22 ನೇ ರಾಜ್ಯವಾಗಿದೆ.

# Current affairs of May 2020 from KPSC Vaani

*** 17 05 2020 ರಾಜೀವ್ ಗಾಂಧಿ ಕಿಸಾನ್ ನ್ಯಾಯ ಯೋಜನೆ ಆರಂಭಿಸಿದ ಛತ್ತೀಸಘಢ**




ಛತ್ತೀಸಘಢ ರಾಜ್ಯ ಸರ್ಕಾರ ರಾಜೀವ್ ಗಾಂಧಿ ಕಿಸಾನ್ ನ್ಯಾಯ ಯೋಜನೆ ಆರಂಭಿಸಲು ಉದ್ದೇಶಿಸಿದ್ದು 2020 ರ ಮೇ 21 ರಿಂದ ಈ ಯೋಜನೆ ಪ್ರಾರಂಭವಾಗಲಿದೆ. ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ನಿಧನ ವಾರ್ಷಿಕೋತ್ಸವದ ನೆನಪಿಗಾಗಿ ಈ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ.

* ಈ ಯೋಜನೆಯು ರಾಜ್ಯದ ಗ್ರಾಮೀಣ ಆರ್ಥಿಕತೆಗೆ 5,100 ಕೋಟಿ ರೂ.ನೇರ ಬಂಡವಾಳ ಒದಗಿಸಲಿದೆ. 2020 21ರ ರಾಜ್ಯ ಬಜೆಟ್ ನಲ್ಲಿ ಈ ಯೋಜನೆಗೆ ಅವಕಾಶ ನೀಡಲಾಗಿದೆ.

* ಈ ಯೋಜನೆಯಡಿ ರೈತರಿಗೆ ಕಬ್ಬು, ಜೋಳ, ಭತ್ತದಂತಹ ಬೆಳೆಗಳಿಗೆ ಎಕರೆಗೆ 10,000ರೂ.ಗಳಷ್ಟು ನೆರವು ನೀಡಲಿದೆ.

*ಈ ಯೋಜನೆಯಿಂದ ಸುಮಾರು 1.87ದಶಲಕ್ಷಕ್ಕೂ ಹೆಚ್ಚು ರೈತರಿಗೆ ಪ್ರಯೋಜನವಾಗಲಿದೆ.

* ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳಿಗಾಗಿ ನೋಂದಾಯಿತ ಮತ್ತು ಅಧಿಸೂಚಿತ ಪ್ರದೇಶಗಳ ಆಧಾರದ ಮೇಲೆ ಹಣವನ್ನು ರೈತರಿಗೆ ವರ್ಗಾಯಿಸಲಾಗುವುದು

*** 18 05 2020 8 ಸಂಭಾವ್ಯ ಕೋರೋಣ ಲಸಿಕೆಗಳು ಕ್ಲಿನಿಕಲ್ ಪರೀಕ್ಷೆಯಲ್ಲಿ: ಡಬ್ಲ್ಯು ಎಚ್ಒ**



ಜಿನೀವ (ಸ್ವಿಟ್ಜರ್‌ಲ್ಯಾಂಡ್) : ಇಡೀ ಜಗತ್ತನ್ನೇ ಮಾರಕವಾಗಿ ಕಾಡುತ್ತಿರುವ ಕೋವಿಡ್ 19 ಸೋಂಕಿಗೆ ಔಷಧಿಯನ್ನು ಸಂಶೋಧಿಸಲು ಬಹುತೇಕ ರಾಷ್ಟ್ರಗಳು ಶ್ರಮಿಸುತ್ತಿವೆ. ಹಾಗೂ ಈಗಾಗಲೇ ಎಂಟು ಸಂಭಾವ್ಯ ಲಸಿಕೆಗಳು ಈಗ ಕ್ಲಿನಿಕಲ್ ಪರೀಕ್ಷೆಯ ಹಂತದಲ್ಲಿರುವುದಾಗಿ ವಿಶ್ವ ಅರೋಗ್ಯ ಸಂಸ್ಥೆ ತಿಳಿಸಿದೆ. ಇದಲ್ಲದೆ, ಇನ್ನೂ 110 ಸಂಭಾವ್ಯ ಲಸಿಕೆಗಳು ಅಭಿವೃದ್ಧಿಯು ವಿವಿಧ ಹಂತಗಳಲ್ಲಿದೆ ಎಂದು ಡಬ್ಲ್ಯೂ ಎಚ್ಒ ತಿಳಿಸಿದೆ. ಕೋರೋಣ ಮಾರಕ ಸಾಂಕ್ರಾಮಿಕದ ಪಿಡುಗನ್ನು ನಿವಾರಿಸಲು ಜಗತ್ತಿನಾದ್ಯಂತ ಹಲವು ರಾಷ್ಟ್ರಗಳು ಶ್ರಮಿಸುತ್ತಿವೆ. ಇವುಗಳ ಪೈಕಿ ಅಮೆರಿಕ, ಚೀನಾ ಮತ್ತು ಜರ್ಮನಿ ಮುಂತಾದ ದೇಶಗಳು ಕೋರೋಣ ಲಸಿಕೆ ಕಂಡುಹಿಡಿಯುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ ಎಂದು ವಿಶ್ವ ಅರೋಗ್ಯ ಸಂಸ್ಥೆ ತಿಳಿಸಿದೆ.


# Current affairs of May 2020 from KPSC Vaani

*** 18 05 2020 ಭಾರತದ ಕುದುರೆ ಸೇವೆ ಮಾಡುವ ಅಶ್ವಸೈನ್ಯ ಇನ್ನು ಸಾಮಾನ್ಯ ಶಸ್ತ್ರಸಜ್ಜಿತ ರೆಜಿಮೆಂಟ್**



ವಿಶ್ವದ ಏಕೈಕ ಕುದುರೆ ಅಶ್ವಸೈನ್ಯ ಹೊಂದಿರುವ ಭಾರತೀಯ ಸೇನೆಯ 61 ನೇ ಅಶ್ವಸೈನ್ಯವನ್ನು ಟ್ಯಾಂಕ್‌ಗಳೊಂದಿಗೆ ನಿಯಮಿತ ಶಸ್ತ್ರಸಜ್ಜಿತ ರೆಜಿಮೆಂಟ್ ಆಗಿ ಪರಿವರ್ತಿಸಲು ಭಾರತೀಯ ಸೇನೆ ನಿರ್ಧರಿಸಿದೆ. ಜೈಪುರ ಮೂಲದ ವಿಧ್ಯುಕ್ತ ಘಟಕವಾಗಿರುವ 61 ನೇ ಅಶ್ವಸೈನ್ಯವನ್ನು ಯುದ್ಧ ಶಕ್ತಿಯನ್ನಾಗಿ ಪರಿವರ್ತಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. 61 ನೇ ಅಶ್ವದಳ : 61 ನೇ ಅಶ್ವಸೈನ್ಯವನ್ನು 1953 ರಲ್ಲಿ ಭಾರತೀಯ ಸೇನೆಯ ಭಾಗವಾಗಿ ಆರಂಭಿಸಲಾಯಿತು. ಅಶ್ವಸೈನ್ಯದಲ್ಲಿರುವ ಸೈನಿಕರು ಲ್ಯಾನ್ಸ್‌ಳಿಂದ ಶಸ್ತ್ರಸಜ್ಜಿತರಾಗಿರುತ್ತಾರೆ.

*** 18 05 2020 ಕೋರೋಣ ವೈರಸ್ ನ ಮೂಲ ಶೋಧಕ್ಕಾಗಿ ವಿಶ್ವ ಸಂಸ್ಥೆಗೆ ಆಗ್ರಹಿಸಿದ 100 ಕ್ಕೂ ಅಧಿಕ ರಾಷ್ಟ್ರಗಳು**



ಜಿನಿವಾ (ಸ್ವಿಟ್ಜರ್ಲೆಂಡ್) : ವಿಶ್ವ ಆರೋಗ್ಯ ಸಂಸ್ಥೆ ತನ್ನ ಮೊಟ್ಟಮೊದಲ ವರ್ಚುವಲ್ ಅಸೆಂಬ್ಲಿಯನ್ನು(ವಾಸ್ತವ ಸ್ಥಿತಿಯ ಸಾಮಾನ್ಯ ಸಭೆ) ಆರಂಭಿಸುತ್ತಿದ್ದು. ಕೋರೋಣ ವೈರಸ್ ಚೀನಾ ದೇಶದಿಂದಲೇ ಆರಂಭವಾಗಿದ್ದು, ಹಾಗೂ ವುಹಾನ್ ಸಿಟಿಯಲ್ಲಿ ಮೊದಲ ಪ್ರಕರಣ ಪತ್ತೆಯಾದ ಬಗ್ಗೆ ಜಗತ್ತಿಗೆ ಗೊತ್ತಿರುವ ಸತ್ಯ.. ಆದರೆ, ಸ್ವತಃ ಚೀನಾ ಇದನ್ನು ಬಹಿರಂಗವಾಗಿ ಒಪ್ಪಿಕೊಂಡಿಲ್ಲ. ಈ ಕುರಿತು ಸಮಗ್ರ ತನಿಖೆ ನಡೆಯಬೇಕೆಂದು ಭಾರತ ಸೇರಿ 100ಕ್ಕೂ ಅಧಿಕ ದೇಶಗಳು ವಿಶ್ವ ಅರೋಗ್ಯ ಸಂಸ್ಥೆಗೆ ಒತ್ತಾಯಿಸಿವೆ. ಚೀನಾ ರಾಷ್ಟ್ರ ಕರೊನಾ ವಿಚಾರವಾಗಿ ನಿಜವಾದ ಸತ್ಯವನ್ನು ಮುಚ್ಚಿಟ್ಟಲ್ಲದೇ, ಅಮೆರಿಕದತ್ತ ಆರೋಪ ಮಾಡಿತ್ತು. ಈ ನಡುವೆ ಅಮೇರಿಕಾ ಕೂಡ ಚೇನಾದ ವೈರಾಣು ಪ್ರಯೋಗಾಲಯದಿಂದಲೇ ಈ ಸೋಂಕು ಸೋರಿಕೆಯಾಗಿದೆ ಎಂದು ಅಮೆರಿಕ ಆರೋಪಿಸಿತ್ತು. ಹೀಗಾಗಿ ಇದರ ಮೂಲದ ಬಗ್ಗೆ ನಿಷ್ಪಕ್ಷಪಾತ, ಸಮಗ್ರ ಹಾಗೂ ಸ್ವತಂತ್ರ ತನಿಖೆ ನಡೆಸಬೇಕೆಂದು ವಿಶ್ವ ಆರೋಗ್ಯ ಸಂಸ್ಥೆಗೆ ಎಲ್ಲ ರಾಷ್ಟ್ರಗಳು ಒತ್ತಾಯಿಸಿವೆ.

# Current affairs of May 2020 from KPSC Vaani

*** 18 05 2020 ಗಗನಯಾನ್ ಮಿಷನ್: ಸ್ಥಳೀಯ ಸ್ಟಾರ್ಟ್ ಅಪ್‌ಗಳ ತಂತ್ರಜ್ಞಾನಗಳನ್ನು ಗುರುತಿಸಿದ ಇಸ್ರೋ**




ಗಗನಯಾನ ಮಿಷನ್‌ನಲ್ಲಿ ಬಳಸಬಹುದಾದ ಕಡಿಮೆ ವೆಚ್ಚದ 17 ತಂತ್ರಜ್ಞಾನಗಳನ್ನು ಭಾರತೀಯ ಸ್ಟಾರ್ಟ್ ಅಪ್‌ಗಳಿಂದ ಒಅಡೆಯಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಗುರುತಿಸಿದೆ. ಪ್ರಸ್ತುತ ಗುರುತಿಸಲಾದ 17 ತಂತ್ರಜ್ಞಾನಗಳಲ್ಲಿ ಗಗನಯಾತ್ರಿಗಳಿಗೆ ಆಹಾರ ಮತ್ತು ಔಷದಿ, ಜೀವ ರಕ್ಷಕ ವ್ಯವಸ್ಥೆಗಳು, ಉಷ್ಣ ಸಂರಕ್ಷಣೆ, ವಿಕಿರಣ ವಿರೋಧಿ ತಂತ್ರಜ್ಞಾನಗಳು ಸೇರಿವೆ. ಗಗನಯಾನ ಮಿಷನ್ : ಗಗನಯಾನ ಇಸ್ರೋದ ಸಿಬ್ಬಂದಿ ಬಾಹ್ಯಾಕಾಶ ಕಾರ್ಯಕ್ರಮವಾಗಿದ್ದು. ಈ ಕಾರ್ಯಕ್ರಮದಡಿ ಮೂವರು ವಾಯುಪಡೆಯ ಪೈಲಟ್‌ಗಳು ಬಾಹ್ಯಾಕಾಶ ಪ್ರವಣ ಕೈಗೊಳ್ಳುವರು. ಇವರ ಜೊತೆ ಸ್ತ್ರೀ ರೂಪದ ರೋಬೋಟ್ ವ್ಯೋಮಿತ್ರಾ ಕೂಡ ಇರಲಿದ್ದಾರೆ. ಗಗನಯಾನ ಮಿಷನ್'ಗಾಗಿ ತರಬೇತಿ ಪಡೆಯಲು ಭಾರತ ತನ್ನ ವಾಯುಪಡೆಯ ಪೈಲಟ್‌ಗಳನ್ನು ರಷ್ಯಾಕ್ಕೆ ಕಳುಹಿಸಿತ್ತು.

*** 18 05 2020 ಅರ್ಜುನಪ್ರಶಸ್ತಿಗೆಅಂಕಿತಾರೈನಾ,ಶರಣ್‌ನಾಮನಿರ್ದೇಶನ**



ನವದೆಹಲಿ : ಟೆನಿಸ್ ಆಟಗಾರರಾದ ಅಂಕಿತಾ ರೈನಾ ಮತ್ತು ದಿವಿಜ್ ಶರಣ್ ಹೆಸರುಗಳನ್ನು ಅರ್ಜುನ ಪ್ರಶಸ್ತಿಗಾಗಿ ಆಲ್ ಇಂಡಿಯಾ ಟೆನಿಸ್ ಅಸೋಸಿಯೇಶನ್ (ಎಐಟಿಎ) ಶಿಫಾರಸು ಮಾಡಲಿದೆ. ಜೊತೆಗೆ ಡೇವಿಸ್ ಕಪ್ ಮಾಜಿ ಕೋಚ್ ನಂದನ್ ಬಾಲ್ ಹೆಸರು ಧ್ಯಾನ್ ಚಂದ್ ಪ್ರಶಸ್ತಿಗೆ ನಿರ್ದೇಶನಗೊಳ್ಳಲಿದೆ.

* ಅಂಕಿತಾ ರೈನಾ 2019 ರ ಏಷ್ಯನ್ ಗೇಮ್ಸ್‌ನ ಮಹಿಳಾ ಸಿಂಗಲ್ಸ್ ಟೆನಿಸ್‌ನಲ್ಲಿ ಕಂಚಿನ ಪದಕ ಪಡೆದಿದ್ದರು. ಹಾಗೂ ಫೆಡ್‌ಕಪ್‌ನಲ್ಲೂ ಅಮೋಘ ಪ್ರದರ್ಶನ ನೀಡಿದ್ದಲ್ಲದೆ, ಭಾರತ ತಂಡ ಚೊಚ್ಚಲ ಬಾರಿಗೆ ವರ್ಲ್ಡ್ ಗ್ರೂಪ್‌ನಲ್ಲಿ ಪ್ಲೇ ಆಫ್‌ಗೆ ಪ್ರವೇಶಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.


* ದೆಹಲಿಯ ದಿವಿಜ್ ಶರಣ್, ಇಂಡೋನೇಷ್ಯಾದ ಜಕಾರ್ತಾದಲ್ಲಿ ನಡೆದಿದ್ದ 2018ರ ಏಷ್ಯನ್ ಗೇಮ್ಸ್‌ನ ಪುರುಷರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಜೊತೆಗೂಡಿ ಚಿನ್ನದ ಪದಕ ಜಯಿಸಿದ್ದರು.

# Current affairs of May 2020 from KPSC Vaani



# Current affairs of May 2020 from KPSC Vaani

## * 19 05 2020 ಭಾರತಕ್ಕೆ ಅಪ್ಪಳಿಸಿದ ಅಂಫಾನ್ ಚಂಡಮಾರುತ



ಇಡೀ ದೇಶವೇ ಕೊರೋನಾ ವೈರಸ್‌ನಿಂದಾಗಿ ತತ್ತರಿಸಿರುವ ಬೆನ್ನಲ್ಲೇ, ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ಚಂಡಮಾರುತ ಅಪ್ಪಳಿದ್ದು, ಈ ಚಂಡಮಾರುತಕ್ಕೆ "ಅಂಫಾನ್" ಎಂದು ನಾಮಕರಣ ಮಾಡಲಾಗಿದೆ. ಈ ಚಂಡಮಾರುತದ ಪರಿಣಾಮವಾಗಿ ಕರ್ನಾಟಕದ ಕೆಲವು ಭಾಗ ಸೇರಿ ದೇಶದ ವಿವಿಧ ರಾಜ್ಯಗಳಲ್ಲಿ ವ್ಯಾಪಿಸಲಿದ್ದು, ಈ ಚಂಡ ಮಾರುತವು ಪಶ್ಚಿಮ ಬಂಗಾಳ ಹಾಗೂ ಬಾಂಗ್ಲಾದೇಶದ ಸಮುದ್ರ ತೀರದಿಂದ ಭೂಪ್ರದೇಶ ಪ್ರವೇಶಿಸಬಹುದು ಎನ್ನಲಾಗಿದೆ. ಜೊತೆಗೆ ಈ ಚಂಡ ಮಾರುತದ ಗಾಳಿಯ ತೀವ್ರತೆ ಗಂಟೆಗೆ 95 ರಿಂದ 105 ಕಿಲೋಮೀಟರ್ ವೇಗದಲ್ಲಿ ಚಲಿಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

## * 19 05 2020 ಭಾರತದ ಪ್ರಥಮ ಪರಮಾಣು ಪರೀಕ್ಷೆಗೆ 46 ವರ್ಷ



ಭಾರತ ಒಂದು ಪರಮಾಣು ಶಕ್ತಿಯಾಗಿ ಗುರುತಿಸಿಕೊಂಡು ಸೋಮವಾರಕ್ಕೆ (ಮೇ 18) 46 ವರ್ಷಗಳು ತುಂಬಿವೆ. 1974ರ ಮೇ 18ರಂದು ರಾಜಸ್ಥಾನದ ಪೋಖ್ರಾನ್ ಗ್ರಾಮದಲ್ಲಿ ದೇಶದ ಮೊದಲ ಪರಮಾಣು ಪರೀಕ್ಷೆ ಯಶಸ್ವಿಯಾಗಿ, ಅದರಲ್ಲೂ ಅತ್ಯಂತ ಶಾಂತಿಯುತವಾಗಿ ನಡೆದಿತ್ತು. ಈ ಪರೀಕ್ಷೆಗೆ ಭಾರತ ಸರ್ಕಾರ ಇರಿಸಿದ್ದ ಕೋಡ್ ನೇಮ್ 'ಸ್ಮೈಲಿಂಗ್ ಬುದ್ಧ' - ಈ ಹೆಸರು ಬರಲು ಕಾರಣ ಪರೀಕ್ಷೆ ನಡೆದದ್ದು ಬುದ್ಧ ಪೂರ್ಣಿಮೆ ದಿನ. ಆದರೆ ಈ ಹೆಸರಿನ ಹಿಂದೆ ಮತ್ತೂಂದು ಕಥೆ ಇದೆ... ಕೊನೆಗೂ ಬುದ್ಧನಕ್ಕ ಪರೀಕ್ಷೆ ನಡೆದ ದಿನ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಬಳಿ ಹೋದ ಬಾಬಾ ಆಟೋಮಿಕ್ ರಿಸರ್ಚ್ ಸೆಂಟರ್‌ನ ನಿರ್ದೇಶಕರಾಗಿದ್ದ ರಾಜಾ ರಾಮಣ್ಣ, 'ಬುದ್ಧ ಕೊನೆಗೂ ನಗುಬೀರಿದ' (ದಿ ಬುದ್ಧ ಹ್ಯಾಸ್ ಫೈನಲಿ ಸ್ಮೈಲ್ಡ್') ಎಂದರು. ಆಗ ಯೋಜನೆಗೆ 'ಸ್ಮೈಲಿಂಗ್ ಬುದ್ಧ' ಬುದ್ಧ ಹೆಸರು ಬಂತು. ಯೋಜನೆ ವಿಶೇಷತೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯನಲ್ಲದ ರಾಷ್ಟ್ರವೊಂದು ನಡೆಸಿದ ಮೊಟ್ಟ ಮೊದಲ ದೃಢೀಕೃತ ಪರಮಾಣು ಪರೀಕ್ಷೆ. ಪ್ರಯೋಗಕ್ಕೂ ಮೊದಲು ಸ್ಫೋಟದಿಂದಾಗುವ ಹಾನಿ ವ್ಯಾಪ್ತಿ ಕುರಿತು ತೀವ್ರ ಚರ್ಚೆ ನಡೆದಿತ್ತು. ಸ್ಫೋಟದಿಂದಾದ ಹಾನಿಯ ತೀವ್ರತೆ 8 12 ಕಿಲೋ ಟನ್ ಗಳಷ್ಟಿತ್ತು. ಅಮೆರಿಕ ಮತ್ತು ಇತರ ದೇಶಗಳ ಗುಪ್ತಚರ ಸಂಸ್ಥೆಗಳಿಗೆ ಈ ಪ್ರಯೋಗದ ಸುಳಿವು ಕೂಡ ಸಿಗಲಿಲ್ಲ. ಪರಮಾಣು ಪ್ರಸರಣ ರಹಿತ ಒಪ್ಪಂದ ಏರ್ಪಟ್ಟ 6 ವರ್ಷ ಬಳಿಕ ಭಾರತ ಈ ಪ್ರಯೋಗ ನಡೆಸಿತು. 1972 : ಪರಮಾಣು ಪರೀಕ್ಷೆಯ ಪಯಣ ಆರಂಭ 1974 : ಪೋಖ್ರಾನ್ ಪರಮಾಣು ಪರೀಕ್ಷೆ ನಡೆದ ವರ್ಷ 1998 : ಪೋಖ್ರಾನ್–II ಪರಮಾಣು ಪರೀಕ್ಷೆ ನಡೆದ ವರ್ಷ


# Current affairs of May 2020 from KPSC Vaani

### * 19 05 2020 ಸ್ವಚ್ಛತೆಯಲ್ಲಿ 5 ಸ್ಟಾರ್ ಪಡೆದ ಮೈಸೂರು ನಗರ



ನವದೆಹಲಿ : ಸಾಂಸ್ಕೃತಿಕ ನಗರ ಎಂದೇ ಖ್ಯಾತಿ ಪಡೆದಿರುವ ರಾಜ್ಯದ ಮೈಸೂರು ನಗರವು ಸ್ವಚ್ಛತೆಯ ವಿಷಯದಲ್ಲಿ ಮತ್ತೊಮ್ಮೆ ಹೆಗ್ಗಳಿಕೆ ಪಡೆದಿದೆ. ಕೇಂದ್ರ ಸರ್ಕಾರ ಘೋಷಿಸಿದ ಕಸಮುಕ್ತ ನಗರಗಳ ಪೈಕಿ ಮೈಸೂರು ನಗರಕ್ಕೆ ಫೈವ್ ಸ್ಟಾರ್ ರ್ಯಾಂಕ್ (ಪಂಚತಾರಾ ಶ್ರೇಣಿ) ದೊರೆತಿದೆ. ಈಗಾಗಲೇ ದೇಶದ ಸ್ವಚ್ಛರೈಲು ನಿಲ್ದಾಣ ಎಂಬ ಹೆಗ್ಗಳಿಕೆ ಪಡೆದಿರುವ ಮೈಸೂರು ಈಗ ಕಸಮುಕ್ತ ನಗರ ಎಂಬ ಮಾನ್ಯತೆಗೂ ಪಾತ್ರವಾಗಿದೆ. ಕೇಂದ್ರ ಸರ್ಕಾರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿರುವಂತೆ ಅಂಬಿಕಾಪುರ್ (ಛತ್ತೀಸ್‌ಗಢ), ರಾಜಕೋಟ್(ಗುಜರಾತ್), ಸೂರತ್ (ಗುಜರಾತ್), ಮೈಸೂರು (ಕರ್ನಾಟಕ), ಇಂದೋರ್ (ಮಧ್ಯಪ್ರದೇಶ) ಹಾಗೂ ನವಿ ಮುಂಬೈ (ಮಹಾರಾಷ್ಟ್ರ) ನಗರಗಳನ್ನು ಪಂಚತಾರಾ ಶ್ರೇಣಿಯ ನಗರಗಳೆಂದು ಗುರುತಿಸಲಾಗಿದೆ. ಇನ್ನುಳಿದಂತೆ ಕರ್ನಾಲ್, ನವದೆಹಲಿ, ತಿರುಪತಿ, ವಿಜಯವಾಡ, ಚಂಡಿಗಢ, ಬಿಲಾಯ್ ನಗರ್ ಮತ್ತುಅಹಮದಾಬಾದ್ ನಗರಗಳು ಮೂರು ಸ್ಟಾರ್ ಶ್ರೇಣಿ ನೀಡಲಾಗಿದೆ. ಜೊತೆಗೆ ದೆಹಲಿ ಕಂಟೋನ್ಮೆಂಟ್, ವಡೋದರ, ಮತ್ತುರೋಹಟನ್ ನಗರಗಳಿಗೆ ಒಂದು ಸ್ಟಾರ್ ಶ್ರೇಣಿಯಾ ಕಸ ಮುಕ್ತ ನಗರಿ ಎಂಬ ಶ್ರೇಣಿ ಕೊಡಲಾಗಿದೆ.

### * 19 05 2020 ಕೊರೋನಾ ವೈರಸ್ ಪರಿಹಾರ ನೀಡುವಲ್ಲಿ ಭಾರತದ ಅಜೀಂ ಪ್ರೇಮ್ ಜಿಗೆ ಜಾಗತಿಕ 3ನೇ ಸ್ಥಾನ




ನವದೆಹಲಿ : ಜಗತ್ತಿನ ಬಹುತೇಕ ಎಲ್ಲ ರಾಷ್ಟ್ರಗಳನ್ನು ವ್ಯಾಪಿಸಿ ಆರ್ಭಟಿಸುತ್ತಿರುವ ಮಾರಕ ಕೊರೋನಾ ವೈರಸ್ ವಿರುದ್ಧ ಹೋರಾಡಲು ಗರಿಷ್ಠ ಪ್ರಮಾಣದ ದೇಣಿಗೆ ನೀಡಿದ ಜಗತ್ತಿನ ಉದ್ಯಮಿಗಳ ಪಟ್ಟಿಯಲ್ಲಿ ಭಾರತದ ಖ್ಯಾತ ಉದ್ಯಮಿ ಹಾಗೂ ವಿಪ್ರೋ ಸಂಸ್ಥಾಪಕ ಅಜೀಮ್ ಪ್ರೇಮ್ ಜಿ ಅವರು ಜಾಗತಿಕ 3ನೇ ಸ್ಥಾನ ಪಡೆದಿದ್ದಾರೆ. ಅಜೀಮ್ ಪ್ರೇಮ್ ಜೀ ಅವರು, ಒಟ್ಟು 1,125 ಕೋಟಿಗಳನ್ನು ಕೊರೋನಾ ವಿರುದ್ಧ ಹೋರಾಡಲು ನೀಡಿದ್ದರು. ಈ ಕುರಿತಂತೆ ನಿಯತಕಾಲಿಕೆ ಫೋರ್ಬ್ಸ್ ಪಟ್ಟಿ ಬಿಡುಗಡೆ ಮಾಡಿದ್ದು, ಇದರಲ್ಲಿ ಅತೀ ಹೆಚ್ಚು ದೇಣಿಗೆ ನೀಡಿದ ಉದ್ಯಮಿಗಳ ಪಟ್ಟಿಯಲ್ಲಿ ಅಜೀಂ ಪ್ರೇಮ್ ಜಿ ಅವರು ಅತೀ ಹೆಚ್ಚು ದೇಣಿಗೆ ನೀಡಿದ ಭಾರತದ ಮೊದಲ ವಿಶ್ವದ ಮತ್ತು ವಿಶ್ವದ ಮೂರನೇ ಉದ್ಯಮಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

*ರೂ.7,549ಕೋಟಿಗಳನ್ನುನೀಡಿರುವಟ್ವಿಟರ್ ಸಿಇಓಜಾಕ್‌ಡೋರ್ಸೆಅವರುಪಟ್ಟಿಯಲ್ಲಿಮೊದಲಸ್ಥಾನಪಡೆದಿದ್ದಾರೆ.

# Current affairs of May 2020 from KPSC Vaani

*** 20 05 2020 ಜರ್ಮನಿ ಮೂಲದ "ವಾನ್ ವೆಲೆಕ್ಸ್" ಪಾದರಕ್ಷೆ ತಯಾರಿಕಾ ಘಟಕ ಚೀನಾದಿಂದ ಭಾರತಕ್ಕೆ ಸ್ಥಳಾಂತರ**




ನವದೆಹಲಿ : ಜರ್ಮನಿಯ ಮೂಲದ ಪಾದರಕ್ಷೆ ತಯಾರಿಕಾ ಕಂಪನಿಯಾದ "ವಾನ್ ವೆಲೆಕ್ಸ್" ಪ್ರಸ್ತುತ ಚೀನಾದಲ್ಲಿ ಕಾರ್ಯನಿರ್ವಹಿಸುತ್ತಿರುವ ತನ್ನ ತಯಾರಿಕಾ ಘಟಕವನ್ನು ಭಾರತಕ್ಕೆ ಸ್ಥಳಾಂತರಿಸಲು ನಿರ್ಧರಿಸಿದೆ. ಈ ಕಂಪನಿಯು ಪ್ರತಿ ವರ್ಷ 30 ಲಕ್ಷಕ್ಕೂ ಹೆಚ್ಚು ಜೋಡಿಯ ಶೂಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿರುವ ತನ್ನ ಘಟಕವನ್ನು ಭಾರತಕ್ಕೆ ಸ್ಥಳಾಂತರ ಮಾಡಲು ಮುಂದಾಗಿದ್ದು, ಸುಮಾರು ₹ 110 ಕೋಟಿ ರೂಪಾಯಿಯಷ್ಟು ಹೂಡಿಕೆ ಮಾಡಲಿದೆ.

* ಭಾರತದ ಉತ್ತರ ಪ್ರದೇಶ ರಾಜ್ಯದಲ್ಲಿ ನೂತನ ಘಟಕ ಸ್ಥಾಪನೆ ಮಾಡಲು ಸಂಸ್ಥೆ ಉದ್ದೇಶಿಸಿದ್ದು "ಲಾಟ್ರಿಕ್ ಇಂಡಸ್ಟ್ರೀಸ್ ಪ್ರವೇಟ್ ಲಿಮಿಟೆಡ್" ಜತೆ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ.

*** 21 05 2020 ವಿಶ್ವ ಅರೋಗ್ಯ ಸಂಸ್ಥೆಯ ಕಾರ್ಯಕಾರಿ ಮಂಡಳಿ ಅಧ್ಯಕ್ಷರಾಗಿ ಕೇಂದ್ರ ಸಚಿವ ಡಾ. ಹರ್ಷವರ್ಧನ್ ಆಯ್ಕೆ**




ನವದೆಹಲಿ : ಭಾರತ ಸರ್ಕಾರದ ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷ್ ವರ್ಧನ್ ಅವರು ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ಮಂಡಳಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಪ್ರಸ್ತುತ ಹುದ್ದೆ ನಿರ್ವಹಿಸುತ್ತಿರುವ ಜಪಾನ್‌ನ ಡಾ.ಹಿರೋಕಿ ನಕಾಟಾನಿ ಅವರ ಸ್ಥಾನದಲ್ಲಿ ಹರ್ಷ್ ವರ್ಧನ್ ಮುಂದುವರೆಯಲಿದ್ದಾರೆ. ಒಟ್ಟು 34 ಸದಸ್ಯರಿರುವ ವಿಶ್ವ ಅರೋಗ್ಯ ಸಂಸ್ಥೆಯ (WHO) ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿ ಹರ್ಷ್ ವರ್ಧನ್ ಅವರು ಇದೆ ಮೇ 22, ರ ಶುಕ್ರವಾರದಂದು ಅಧಿಕಾರ ಸ್ವೀಕರಿಸುವ ಸಾಧ್ಯತೆ ಇದೆ.

* ಮೇ 19 ರಂದು ನಡೆದ 194 ಸದಸ್ಯ ಬಲದ ವಿಶ್ವ ಆರೋಗ್ಯ ಅಧಿವೇಶನದಲ್ಲಿ ಭಾರತಕ್ಕೆ ಎಕ್ಸಿಕ್ಯೂಟಿವ್ ಬೋರ್ಡ್ ಛೇರ್ಮನ್ ಸ್ಥಾನ ನೀಡಲು ಅಂಕಿತ ಹಾಕಲಾಯಿತು.

* 3 ವರ್ಷದ ಅವಧಿಗೆ ಈ ನೇಮಕಾತಿ ನಡೆದಿದ್ದು, ಮೊದಲ ವರ್ಷ ಡಾ. ಹರ್ಷ್ ವರ್ಧನ್ ಅವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವರು. ಉಳಿದ 2 ವರ್ಷ ಬೇರೆ ದೇಶದ ಪ್ರತಿನಿಧಿಗಳು ಆ ಸ್ಥಾನ ಮುಂದುವರೆಸಿದ್ದಾರೆ.

# Current affairs of May 2020 from KPSC Vaani

*** 21 05 2020 ಹೈಕೋರ್ಟ್‌ನ್ಯಾಯಮೂರ್ತಿಕೆ.ಎನ್.ಫಣೀಂದ್ರನಿವೃತ್ತಿ**



ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆಸಲ್ಲಿಸುತ್ತಿದ್ದ ಕೆ.ಎನ್.ಫಣೀಂದ್ರ ಅವರು ಕರ್ತವ್ಯದಿಂದ ಇತ್ತೀಚೆಗೆ ನಿವೃತ್ತಿ ಹೊಂದಿದರು.

* ಫಣೀಂದ್ರ ಅವರು 1985ರಲ್ಲಿ ತುಮಕೂರಿನಲ್ಲಿ ವಕೀಲಿ ವೃತ್ತಿ ಆರಂಭಿಸಿದ್ದರು. 1998ರಲ್ಲಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರಾಗಿ ನೇಮಕಗೊಂಡು ಬೆಂಗಳೂರು, ಹಾವೇರಿ, ಶಿವಮೊಗ್ಗ ಜಿಲ್ಲಾ ಪ್ರಧಾನ ನ್ಯಾಯಧೀಶರಾಗಿ ಸೇವೆ ಸಲ್ಲಿಸಿದ್ದಾರೆ.

* 2013ರ ಅಕ್ಟೋಬರ್ 24 ರಂದು ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

*** 21 05 2020 ಕೋರೋಣಭೀತಿ"ಬೆಂಗಳೂರುಟೆಕ್‌ಸಮಿಟ್"ಮುಂದೂಡಿಕೆ**

ಬೆಂಗಳೂರು: ಪ್ರತಿಷ್ಠಿತ ಬೆಂಗಳೂರು ಟೆಕ್ ಸಮಿಟ್ (BTS) ಅನ್ನು ಸೆಪ್ಟೆಂಬರ್ 21 ರಿಂದ 23ರವರೆಗೆ ನಡೆಸಲು ತೀರ್ಮಾನಿಸಲಾಗಿತ್ತಾದರೂ ಕೋರೋಣ ವೈರಸ್ ಭೀತಿಯಿಂದಾಗಿ ಈ ಸಮಿಟ್'ನ್ನು ಬರುವ ನವೆಂಬರ್ 19ರಿಂದ 21ರವರೆಗೆ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸಿರುವದಾಗಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು. ಈ ಬಾರಿಯ ಟೆಕ್ ಸಮಿಟ್ ಹಲವು ವಿಶೇಷಗಳಿಂದ ಕೂಡಿರಲಿದ್ದು, ಹಲವು ಅರೋಗ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುವದು. ಜೊತೆಗೆ ಕೋವಿಡ್ ಸಂದರ್ಭದಲ್ಲಿ ಜನರು ಎದುರಿಸುವ ಸಮಸ್ಯೆಗಳಿಗೆ ತಂತ್ರಜ್ಞಾನ ಹೇಗೆ ಸಹಕಾರಿಯಾಗಲಿದೆ ಮತ್ತು ಹೊಸ ಹೊಸ ತಂತ್ರಜ್ಞಾನಗಳ ಬಗ್ಗೆಯೂ ತಜ್ಞರು ಉಪನ್ಯಾಸ ಈ ಕಾರ್ಯಕ್ರಮದಲ್ಲಿ ನಡೆಯಲಿದೆ.

## Current affairs of May 2020 from KPSC Vaani




# Current affairs of May 2020 from KPSC Vaani

*** 21 05 2020 ಆಯುಷ್ಮಾನ್‌ಭಾರತಯೋಜನೆ:ಫಲಾನುಭವಿಗಳಸಂಖ್ಯೆ ಒಂದುಕೋಟಿ**



ನವದೆಹಲಿ: ಕೇಂದ್ರ ಸರ್ಕಾರ ಆರಂಭಿಸಿದ ಮಹತ್ವಾಕಾಂಕ್ಷೆಯ ಅರೋಗ್ಯ ಯೋಜನೆಯಾದ ಆಯುಷ್ಮಾನ್ ಭಾರತ (ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ) ಯೋಜನೆಯಡಿ ಇಲ್ಲಿಯವರೆಗೆ ಒಂದು ಕೋಟಿಗೂ ಅಧಿಕ ಫಲಾನುಭವಿಗಳ ಚಿಕಿತ್ಸೆ ನೀಡುರುವದಾಗಿ ಪ್ರಧಾನಿ ಮೋದಿ ತಿಳಿಸಿದ್ದಾರೆ.

* ಆಯುಷ್ಮಾನ್ ಭಾರತ ಯೋಜನೆ : 2018ರಲ್ಲಿ ಈ ಯೋಜನೆಗೆ ಚಾಲನೆ ಜಗತ್ತಿನಲ್ಲಿಯೇ ಬೃಹತ್ ಆರೋಗ್ಯ ಯೋಜನೆ ಎಂಬ ಹೆಗ್ಗಳಿಕೆ ಎರಡು ವರ್ಷಗಳಅವಧಿಯಲ್ಲಿಈ ಯೋಜನೆಯಡಿ ಒಂದುಕೋಟಿ ಜನರು ನೋಂದಣಿ

*** 22 05 2020 ಅಯೋಧ್ಯಾರಾಮಮಂದಿರನಿರ್ಮಾಣದವೇಳೆಪುರಾತನ ವಿಗ್ರಹಗಳು ಪತ್ತೆ**



ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ಆದೇಶದನ್ವಯ ಕೇಂದ್ರ ಸರಕಾರ ನೇಮಿಸಿದ ಸಮಿತಿ ನಿರ್ಣಯದಂತೆ ರಾಮ ಮಂದಿರ ನಿರ್ಮಾಣಕ್ಕಾಗಿ ಲಾಕ್‌ಡೌನ್ ನಡುವೆ 67 ಎಕರೆ ವಿಸ್ತೀರ್ಣದ ಶ್ರೀರಾಮ ಜನ್ಮಭೂಮಿ ಪರಿಸರದಲ್ಲಿ ಉತ್ಖನನ ಸೇರಿ ವಿವಿಧ ಕಾರ್ಯಗಳು ಆರಂಭವಾಗಿವೆ. ಈ ಭೂಮಿ ಅಗೆಯುವ ಹಾಗೂ ಸಮತಟ್ಟು ಮಾಡುವ ಪ್ರಕ್ರಿಯೆ ವೇಳೆ ಅನೇಕ ಪುರಾತನ ಮೂರ್ತಿ ಹಾಗೂ ಮಂದಿರದ ಅವಶೇಷಗಳು ಲಭ್ಯವಾಗಿವೆ. ಇವುಗಳಲ್ಲಿ ದೇವಿ ದೇವತೆಯ ತುಂಡಾದ ಮೂರ್ತಿಗಳ ಪೈಕಿ ಬ್ಲ್ಯಾಕ್ ಟಚ್ ಸ್ಟೋನ್‌ನ ಸ್ಥಂಭ, ಆರು ರೆಡ್ ಸ್ಯಾಂಡ್ ಸ್ಟೋನ್ ಸ್ಥಂಭ, ಹಾಗೂ ಐದು ಅಡಿ ಎತ್ತರದ ಶಿವಲಿಂಗ ಸೇರಿ ಅನೇಕ ಪುರಾತನ ಅವಶೇಷಗಳು ದೊರೆತಿವೆ.

# Current affairs of May 2020 from KPSC Vaani

*** 22 05 2020 ಆತ್ಮನಿರ್ಭರಭಾರತಯೋಜನಾ:ಮೋದಿಪ್ಯಾಕೇಜ್‌ಗೆ ಸಚಿವಸಂಪುಟಒಪ್ಪಿಗೆ**




ನವದೆಹಲಿ: ದೇಶದ ಆರ್ಥಿಕ ಸ್ಥಿತಿ ಉತ್ತೇಜನಕ್ಕಾಗಿ ಕೇಂದ್ರ ಸರಕಾರ ಘೋಷಿಸಿದ್ದ 20 ಲಕ್ಷ ಕೋಟಿ ರೂ. ಪ್ಯಾಕೇಜ್‌ನ ಹಲವು ಮಹತ್ವದ ಕಾರ್ಯಕ್ರಮಗಳಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಸಭೆ ಮೇ 20 ರಂದು ಅನುಮೋದನೆ ನೀಡಲಾಯಿತು. ದೇಶದ ಆರ್ಥಿಕತೆ ಸುಧಾರಿಸುವ ಸಲುವಾಗಿ ವಿವಿಧ ಕ್ಷೇತ್ರಗಳ ಗಮನದಲ್ಲಿರಿಸಿಕೊಂಡು ದಿನಾಂಕ ಮೇ 13 ರಿಂದ ಒಟ್ಟು ಐದು ಹಂತಗಳಲ್ಲಿ ಹಲವು ಮಹತ್ವದ ಘೋಷಣೆಗಳನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದರು.

*** 22 05 2020 ಛತ್ತೀಸ್ ಗಢ ಸರಕಾರದಿಂದ ರೈತರಿಗಾಗಿ 'ರಾಜೀವ್ ಗಾಂಧಿ ಕಿಸಾನ್ ನ್ಯಾಯ್' ಯೋಜನೆಜಾರಿ**




ರಾಯಪುರ : ಛತ್ತೀಸ್ ಗಢ ಸರಕಾರವು ರೈತರಿಗಾಗಿ 'ರಾಜೀವ್ ಗಾಂಧಿ ಕಿಸಾನ್ ನ್ಯಾಯ್' ಯೋಜನೆ ಜಾರಿಗೊಳಿಸಿದ್ದು ಈ ನೂತನ ಯೋಜನೆಯಡಿರೈತರತಲಾಎಕರೆಭೂಮಿಗೆ10ಸಾವಿರರೂ.ಬ್ಯಾಂಕ್ ಖಾತೆಗೆ ವರ್ಗಾಯಿಸಲಿದೆ.

* ಈ ಯೋಜನೆಯಲ್ಲಿ ನೇರಲಾಭ ವರ್ಗಾವಣೆ ಮೂಲಕ ಮೊದಲ ಕಂತಿನಲ್ಲಿ ಸರಕಾರವು 19 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಸುಮಾರು 1,500 ಕೋಟಿ ರೂ.ಗಳನ್ನು ಹಣವನ್ನು ವರ್ಗಾಯಿಸಲಿದೆ.

# Current affairs of May 2020 from KPSC Vaani

## * 22 05 2020 ಭಾರತ ಬಾಂಗ್ಲಾದೇಶ ಒಳನಾಡಿನ ಜಲ ಸಾರಿಗೆ ಮತ್ತು ವ್ಯಾಪಾರ ಒಪ್ಪಂದಕ್ಕೆ ಸಹಿ




ಭಾರತ ಮತ್ತು ಬಾಂಗ್ಲಾದೇಶದ ಒಳನಾಡಿನ ಜಲ ಸಾರಿಗೆ ಮತ್ತು ವ್ಯಾಪಾರ ಶಿಷ್ಟಾಚಾರದ ಎರಡನೇ ಅನುಬಂಧಕ್ಕೆ ಬಾಗ್ಲಾದೇಶದಲ್ಲಿ ಸಹಿ ಹಾಕಲಾಯಿತು.

* ಈ ನೂತನ ಒಪ್ಪಂದಡಿಯಲ್ಲಿ ಉಭಯ ದೇಶಗಳು ನಿಗದಿಪಡಿಸಿದ ಮಾರ್ಗದಲ್ಲಿ ಸಂಚರಿಸಬಹುದು. ಅಲ್ಲದೆ, ಭಾರತದ ಧುಬ್ರಿ ಮತ್ತು ಬಾಗ್ಲಾದೇಶದ ಚಿಲ್ಮರಿ ನಡುವೆ ಆಳವಿಲ್ಲದ ಯಾಂತ್ರಿಕೃತ ಹಡಗುಗಳ ಸಂಚಾರಕ್ಕೆ ಅನುಮತಿ ನೀಡಲಾಗಿದೆ.

* ಸಹಿ ಮಾಡಿದ ಹೊಸ ಅನುಬಂಧದ ಅಡಿಯಲ್ಲಿ, ಇಂಡೋ ಬಾಂಗ್ಲಾದೇಶದ ಮಾರ್ಗಗಳ ಸಂಖ್ಯೆಯನ್ನು 8 ರಿಂದ 10 ಕ್ಕೆ ಹೆಚ್ಚಿಸಲಾಗಿದೆ.

* ಭಾರತಕ್ಕೆ ಆಹಾರ ಧಾನ್ಯಗಳು, ಕೃಷಿ ಉತ್ಪನ್ನಗಳು, ರಸಗೊಬ್ಬರಗಳು, ಧಾರಕ ಸರಕು ಮತ್ತು ಸಿಮೆಂಟ್ ಸಾಗಿಸಲು ಒಳನಾಡಿನ ಜಲಸಾರಿಗೆ ಮುಖ್ಯವಾಗಿದೆ.

## * 22 05 2020 ಕೊನಾರ್ಕ್ ಸೂರ್ಯ ದೇವಾಲಯ ಮತ್ತು ಪಟ್ಟಣವನ್ನು 100% ಸೌರೀಕರಣ




ಭಾರತ ಸರ್ಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯವು ಕೊನಾರ್ಕ್ ಪಟ್ಟಣ ಮತ್ತು ಕೊನಾರ್ಕ್ ಐತಿಹಾಸಿಕ ಸೂರ್ಯ ದೇವಾಲಯವನ್ನು ಸಂಪೂರ್ಣವಾಗಿ ಅಂದರೆ 100% ಸೌರೀಕರಣಗೊಳಿಸುವ ಯೋಜನೆಯನ್ನು ಆರಂಭಿಸಿದೆ.

* ಸೌರ ಶಕ್ತಿ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಈ ಯೋಜನೆಯಡಿ ಕೊನಾರ್ಕ್ ಪಟ್ಟಣದ ಐತಿಹಾಸಿಕ ಸೂರ್ಯ ದೇವಾಲಯದ ಮತ್ತು ಪಟ್ಟಣವನ್ನು ಅಭಿವೃದ್ಧಿ ಪಡಿಸಲಾಗುವದು.

* ಈ ಯೋಜನೆಯಡಿ 10 ಮೆಗಾವ್ಯಾಟ್ ಗ್ರಿಡ್ ಸಂಪರ್ಕಿತ ಸೌರಶಕ್ತಿಯನ್ನು ಸೌರ ಕುಡಿಯುವ ನೀರಿನ ಕಿಯೋಸ್ಕ್ ಳು, ಸೌರ ಮರಗಳು ಮತ್ತು ಆಫ್ ಗ್ರಿಡ್ ಸೌರ ವಿದ್ಯುತ್ ಸ್ಥಾವರಗಳಂತಹ ಉಪಕರಣಗಳನ್ನು ಅಳವಡಿಸುವ ಮೂಲಕ ಉತ್ಪಾದಿಸಲಾಗುವದು.

* ಕೊನಾರ್ಕ್ ಸೂರ್ಯ ದೇವಾಲಯ : ಈ ದೇವಾಲಯವನ್ನು 13 ನೇ ಶತಮಾನದಲ್ಲಿ ನಿರ್ಮಿಸಲಾಯಿತು. ಇದನ್ನು ರಾಜ ನರಸಿಂಹದೇವ 1 ನಿರ್ಮಿಸಿದ. ದೇವಾಲಯವನ್ನು ರಥದ ಆಕಾರದಲ್ಲಿ ವಿನ್ಯಾಸಗೊಳಿಸಲಾಗಿದೆ. ಇದನ್ನು 1984 ರಲ್ಲಿ ಯುನೆಸ್ಕೋ ವಿಶ್ವ ಪರಂಪರೆಯ ತಾಣವೆಂದು ಘೋಷಿಸಲಾಯಿತು.

# Current affairs of May 2020 from KPSC Vaani

*** 22 05 2020 ಅಂಫಾನ್ ಚಂಡಮಾರುತ : ಪಶ್ಚಿಮ ಬಂಗಾಳಕ್ಕೆ 1,000 ಕೋಟಿ ಆರಂಭಿಕ ಪರಿಹಾರ ಘೋಷಣೆ**



ಕೋಲ್ಕತಾ : ಭಾರತದ ಪೂರ್ವ ಕರಾವಳಿ ತೀರಕ್ಕೆ ಅಪ್ಪಳಿಸಿರುವ ಅಂಪನ್ ಚಂಡಮಾರುತದಿಂದ ಒಡಿಸ್ಸಾ, ಪಶ್ಚಿಮ ಬಂಗಾಳ ಸೇರಿ ಹಲವು ರಾಜ್ಯಗಳು ಸಂಕಷ್ಟ ಎದುರುಸುತ್ತಿವೆ. ಈ ನಡುವೆ ಪ್ರಧಾನಿ ನರೇಂದ್ರ ಮೋದಿಯವರು ಪಶ್ಚಿಮ ಬಂಗಾಲ ರಾಜ್ಯಕ್ಕೆ ಭೇಟಿ ನೀಡಿ ಚಂಡಮಾರುತದಿಂದ ಹಾನಿಯಾದ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು. ಬಳಿಕ ಪ್ರಧಾನಿಗಳು ಪಶ್ಚಿಮ ಬಂಗಾಳಕ್ಕೆ 1,000 ಕೋಟಿ ರೂಪಾಯಿಯನ್ನು ತತ್‌ಕ್ಷಣದ ಆರಂಭಿಕ ಪರಿಹಾರವಾಗಿ ಘೋಷಿಸಿದರು. ಅಲ್ಲದೆ ಮುಂದಿನ ದಿನಗಳಲ್ಲಿ ಇನ್ನಷ್ಟು ಸಹಾಯ ನೀಡುವುದಾಗಿ ತಿಳಿಸಿದರು. ಜೊತೆಗೆ ಚಂಡಮಾರುತದಿಂದ ಮೃತಪಟ್ಟವರ ಕುಟುಂಬಗಳಿಗೆ 2 ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ 50,000 ರೂ ಪರಿಹಾರ ನೀಡುವುದಾಗಿ ಪ್ರಧಾನಿ ತಿಳಿಸಿದರು.

*** 23 05 2020 ನಾಡೋಜ ಚೆನ್ನವೀರ ಕಣವಿ ಪತ್ನಿ, ಹಿರಿಯ ಲೇಖಕಿ ಶಾಂತಾದೇವಿ ಕಣವಿ ಇನ್ನಿಲ್ಲ**



ಬೆಳಗಾವಿ:ಪ್ರಸಿದ್ಧಕವಿಚೆನ್ನವೀರಕಣವಿಯವರಪತ್ನಿ,ಹಿರಿಯಲೇಖಕಿಶಾಂತಾದೇವಿಕಣವಿಯವರು ತಮ್ಮ 88 ವಯಸ್ಸಿನಲ್ಲಿ ವಿಧಿವಶರಾದರು. ಇವರು ಕಥೆಗಾರ್ತಿ, ಲೇಖಕಿಯಾಗಿ ಹೆಸರಾಗಿದ್ದ ಶಾಂತಾದೇವಿಯವರು ಮೂಲತಃ ಬೆಳಗಾವಿ ಜಿಲ್ಲೆಯ ಸಂಕೇಶ್ವರದವರು. ಮುಂದೆ ಚೆನ್ನವೀರ ಕಣವಿಯವರನ್ನು ವಿವಾಹವಾಗಿ ಅವರ ಸಾಹಿತ್ಯ ಸೃಷ್ಟಿಗೆ ಸ್ಫೂರ್ತಿಯಾಗಿದ್ದರು. ಶಾಂತಾದೇವಿ ಕಣವಿ ಕಿರುಪರಿಚಯ :


*1933ರಲ್ಲಿವಿಜಯಪುರದಲ್ಲಿಜನಿಸಿದ್ದಶಾಂತಾದೇವಿಕಣವಿತಂದೆಸಿದ್ದಪ್ಪ, ತಾಯಿ ಭಾಗೀರಥಿದೇವಿ.

* ಸಂಜೆಮಲ್ಲಿಗೆ, ಬಯಲು ಆಲಯ, ಮರು ವಿಚಾರ, ಜಾತ್ರೆ ಮುಗಿದಿತ್ತು, ಕಳಚಿಬಿದ್ದ ಪೈಜಣ, ನೀಲಿಮಾತೀರ ಇವು ಶಾಂತಾದೇವಿಯವರ ಕಥಾಸಂಕಲನಗಳು.

* ಅಜಗಜಾಂತರ ಹರಟೆಗಳ ಸಂಗ್ರಹ. ನಿಜಗುಣ ಶಿವಯೋಗಿ ಎಂಬ ಮಕ್ಕಳ ಸಾಹಿತ್ಯ ಸಹ ಪ್ರಕಟಿಸಿದ್ದಾರೆ.

* ಬಯಲು ಆಲಯ ಕಥಾಸಂಕಲನಕ್ಕೆ 1974ರ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿತ್ತು. 1987ರಲ್ಲಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಗೆಸಹ ಶಾಂತಾದೇವಿ ಭಾಜನರಾಗಿದ್ದರು.

## Current affairs of May 2020 from KPSC Vaani



## Current affairs of May 2020 from KPSC Vaani

*** 23 05 2020 ಅಂಫಾನ್ ಚಂಡಮಾರುತ: ಒಡಿಶಾ ರಾಜ್ಯಕ್ಕೆ 500 ಕೋಟಿ ರುಪಾಯಿ ನೆರವು**



ಭುವನೇಶ್ವರ: ಅಂಫಾನ್ ಚಂಡಮಾರುತ ದಾಳಿಯಿಂದಾಗಿ ಭಾರತದ ಪೂರ್ವ ಕರಾವಳಿಯ ರಾಜ್ಯಗಳಿಗೆ ಸಂಕಷ್ಟ ಅನುಭವಿಸುತ್ತಿದ್ದು ಅದರಲ್ಲೂ ಪಶ್ಚಿಮ ಬಂಗಾಲ ಮತ್ತು ಒಡಿಶಾ ರಾಜ್ಯಗಳು ತೀವ್ರ ಹಾನಿಗೊಳಗಾಗಿವೆ. ಈ ಹಿನ್ನಲೆಯಲ್ಲಿ ಪ್ರಧಾನಿ ಮೋದಿಯವರು ಒಡಿಶಾದಲ್ಲಿ ಚಂಡಮಾರುತದಿಂದ ಹಾನಿಗೊಳಗಾದ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು. ಅಲ್ಲದೆ ಪೀಡಿತ ಒಡಿಶಾಗೆ 500 ಕೋಟಿ ರುಪಾಯಿಯ ಮುಂಗಡ ಹಣಕಾಸು ನೆರವು ಘೋಷಿಸಿದ್ದಾರೆ.

* ಮೋದಿ ಅವರು ಭದ್ರಾಕ್, ಬಾಲಸೋರ್, ಜಾಜ್‌ಪುರ ಮತ್ತು ಮಯೂರ್ಭಂಜ್ ಮುಂತಾದ ಜಿಲ್ಲೆಗಳಲ್ಲಿ ಸುಮಾರು 90 ನಿಮಿಷಗಳ ಕಾಲ ವೈಮಾನಿನ ಸಮೀಕ್ಷೆ ಮಾಡಿದರು.


*** 23 05 2020 ಕೊರೊನಾ ಆರ್ಥಿಕ ಸಂಕಷ್ಟ: ಈ ವರ್ಷ ಜಿಡಿಪಿ ಗುರಿ ಕೈಬಿಟ್ಟ ಚೀನಾ**



ಬೀಜಿಂಗ್: ಕೋವಿಡ್ 19 ವೈರಸ್ ಭೀತಿ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ ಚೀನಾದ ವಾರ್ಷಿಕ ಸಂಸತ್ ಅಧಿವೇಶನ ಆರಂಭವಾಗಿದ್ದು, 'ಕೊರೊನಾ ಪಿಡುಗಿನಿಂದಾಗಿ ಚೇನಾ ಹಾಗೂ ವಿಶ್ವದ ಆರ್ಥಿಕತೆ ಕುಸಿದ ಹಿನ್ನಲೆ ಅಂತರರಾಷ್ಟ್ರೀಯ ವ್ಯಾಪಾರ ಇಳಿಕೆಯಾಗಿರುವುದರಿಂದ ಸರ್ಕಾರ ಈ ವರ್ಷ ಯಾವುದೇ ಆರ್ಥಿಕ ವೃದ್ಧಿ ದರದ(ಜಿಡಿಪಿ) ಗುರಿ ಹೊಂದಿಲ್ಲ' ಎಂದು ಚೇನಾ ಪ್ರಧಾನಿ ಲಿ ಕೆಚಾಂಗ್ ತಿಳಿಸಿದ್ದಾರೆ. ಕೊರೊನಾ ದಾಳಿಯಿಂದಾಗಿ ಬರುವ ದಿನಗಳ ಬೆಳವಣಿಗೆಗಳನ್ನು ಊಹಿಸಲು ಅಸಾಧ್ಯ. ಹೀಗಾಗಿ ಜಿಡಿಪಿ ಗುರಿ ಇರಿಸಿಲ್ಲ. 2018 ವರ್ಷಕ್ಕೆ ಹೋಲಿಸಿದರೆ 2019ರಲ್ಲಿ GDP ಶೇ 6.1ರಷ್ಟು ಹೆಚ್ಚಾಗಿದೆ. ಜೊತೆಗೆ ದೇಶದಲ್ಲಿ ಸುಮಾರು 1.35 ಕೋಟಿ ಉದ್ಯೋಗವನ್ನು ಸೃಷ್ಟಿಯಾಗಿದ್ದಲ್ಲದೆ ನಿರುದ್ಯೋಗ ಪ್ರಮಾಣ ಶೇಕಡಾ 5.3 ರಷ್ಟು ಕಡಿಮೆಯಾಗಿದೆ ಎಂದು ಚೇನಾ ಪ್ರಧಾನಿ ತಿಳಿಸಿದರು.

# Current affairs of May 2020 from KPSC Vaani

*** 24 05 2020 ಜಗತ್ತಿನ ಅತ್ಯಂತ ವೇಗದ ಇಂಟರ್‌ನೆಟ್ ವೇಗ ಹೊಂದಿರುವ ರಾಷ್ಟ್ರವಾಗಿ ಆಸ್ಟ್ರೇಲಿಯಾ**




ಜಗತ್ತಿನ ಅತ್ಯಂತ ವೇಗದ ಇಂಟರ್‌ನೆಟ್ ವೇಗವನ್ನು ಹೊಂದಿರುವ ರಾಷ್ಟ್ರವಾಗಿ ಆಸ್ಟ್ರೇಲಿಯಾವು ಸಾಧನೆ ಮಾಡಿದೆ. ಪ್ರಸ್ತುತ ನಡೆಸಿದ ಪರೀಕ್ಷೇ ವರದಿಯನುಸಾರ ಇಂಟರ್ನೆಟ್ ಪ್ರತಿ ಸೆಕೆಂಡಿಗೆ 44.2 ಟೆರಾಬೈಟ್ ನಷ್ಟು ವೇಗ ಹೊಂದಿದೆ ಎಂದು ತಿಳಿದು ಬಂದಿದೆ. ಹಾಲಿ ಇರುವ ಬ್ರಾಡ್‌ಬ್ಯಾಂಡ್ ವೇಗಕ್ಕೆ ಹೋಲಿಸಿದರೆ ಈ ವೇಗವು ಸುಮಾರು ಮಿಲಿಯನ್ ಪಟ್ಟು ಹೆಚ್ಚಾಗಿದೆ. ಈ ಇಂಟರ್ನೆಟ್ ವೇಗದಲ್ಲಿ ಬಳಕೆದಾರರು ಕೇವಲ ಒಂದು ಸೆಕೆಂಡ್ ಸಮಯದಲ್ಲಿ HD(ಅಧಿಕ ಗುಣಮಟ್ಟದ) 1,000 ಚಲನಚಿತ್ರಗಳನ್ನು ಡೌನ್‌ಲೋಡ್ ಮಾಡಬಹುದು ಎಂದು ಸಂಶೋಧಕರು ಹೇಳಿದ್ದಾರೆ. ಪ್ರಸ್ತುತ ಸಿಂಗಾಪುರವು ಜಗತ್ತಿನ ಅತ್ಯಂತ ವೇಗದ ಇಂಟರ್‌ನೆಟ್ ಸೇವೆಯನ್ನು ಹೊಂದಿರುವ ನಗರವಾಗಿದ್ದು ಇಲ್ಲಿನಡೌನ್‌ಲೋಡ್‌ವೇಗವುಪ್ರತಿಸೆಕೆಂಡಿಗೆ197.3ಮೆಗಾಬೈಟ್ಸ್(ಎಂಬಿಪಿಎಸ್)ಇದೆ.

*** 24 05 2020 ಕೋರೋಣ ಸೋಂಕು : ಲಂಕಾ ಅಧ್ಯಕ್ಷ ಮತ್ತು ಮಾರಿಷಸ್ ಪ್ರಧಾನಿ ಜತೆ ಮೋದಿ ಚರ್ಚೆ**



ಕೋವಿಡ್ 19 ಸಂದಿಗ್ಧ ಪರಿಸ್ಥಿತಿ ಕುರಿತು ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಶ್ರೀಲಂಕಾ ಅಧ್ಯಕ್ಷ ಗೊಟಬಾಯ ರಾಜಪಕ್ಸ ಮತ್ತು ಮಾರಿಷಸ್ ಪ್ರಧಾನಿ ಪ್ರವೀಂದ್ ಜಗನ್ನಾಥ್ ಜೊತೆ ಮಾತುಕತೆ ನಡೆಸಿದರು. ಈ ಮಾತುಕತೆ ವೇಳೆ ಭಾರತಕ್ಕೆ ನೆರವಾಗುವ ಅಭಿವೃದ್ಧಿ ಯೋಜನೆಗಳು ಸೇರಿ ಬಂಡವಾಳ ಹೂಡಿಕೆಗೆ ಉಭಯ ದೇಶಗಳ ನಾಯಕರು ಒಪ್ಪಿಗೆ ಸೂಚಿಸಿರುವುದಾಗಿ ಮೋದಿ ತಿಳಿಸಿದ್ದಾರೆ.

# Current affairs of May 2020 from KPSC Vaani

*** 24 05 2020 ಇಸ್ರೋದ 'ಗಗನಯಾನ' ಯೋಜನೆ ನಾಲ್ವರು ಭಾರತೀಯ ಗಗನಯಾತ್ರಿಗಳಿಗೆ ರಷ್ಯಾದಲ್ಲಿ ತರಬೇತಿ**



ಬೆಂಗಳೂರು :ಭಾರತೀಯ ಇಸ್ರೋ ಆರಂಭಿಸಲಿರುವ ಪ್ರಪ್ರಥಮ ಮಾನವಸಹಿತ ಅಂತರಿಕ್ಷ ಯಾನವಾದ 'ಗಗನಯಾನ'ಕ್ಕಾಗಿ ಈಗಾಗಲೇ ನಾಲ್ಕು ಗಗನಯಾತ್ರಿಗಳನ್ನು ಭಾರತದ ವಾಯುಪಡೆಯಿಂದ ಆಯ್ಕೆ ಮಾಡಲಾಗಿದ್ದು, ಈ ನಾಲ್ವರು ಗಗನಯಾತ್ರಿಗಳಿಗೆ ರಷ್ಯಾದಲ್ಲಿ ಪುನರಾರಂಭಗೊಂಡಿದೆ. ಈ ತರಬೇತಿ ಈಗಾಗಲೇ 2020 ರ, ಫೆ.20ರಿಂದ ಆರಂಭವಾಗಿತ್ತಾದರೂ ಕೋರೋಣ ಸೋಂಕಿನ ಭೀತಿಯಿಂದಾಗಿ ಅದನ್ನು ನಿಲ್ಲಿಸಲಾಗಿತ್ತು.

* ಭಾರತೀಯ ವಾಯುಪಡೆಯ ನಾಲ್ವು ಯುದ್ಧವಿಮಾನ ಪೈಲಟ್‌ಗಳು ಗಗಾರಿನ್ ರೀಸರ್ಚ್ ಆಯಂಡ್ ಟೆಸ್ಟ್ ಕಾಸ್ಮೊನಾಟ್ ಟ್ರೇನಿಂಗ್ ಸೆಂಟರ್‌ನಲ್ಲಿ ತರಬೇತಿಯನ್ನು ಮುಂದುವರೆಸಿದ್ದಾರೆ.

* ಭಾರತದ 75ನೇ ಸ್ವಾತಂತ್ರೋತ್ಸವ ವರ್ಷವಾದ 2022ರಲ್ಲಿ 10,000 ಕೋ.ರೂ.ವೆಚ್ಚದ "ಗಗನಯಾನ" ಯೋಜನೆಗೆ ಚಾಲನೆ ದೊರೆಯುವ ನಿರೀಕ್ಷೆಯಿದೆ.

*** 24 05 2020 ಒಸಾಕಾವಿಶ್ವದಶ್ರೀಮಂತಮಹಿಳಾಕ್ರೀಡಾಪಟು**



ನ್ಯೂಯಾರ್ಕ್: ಜಪಾನ್ ರಾಷ್ಟ್ರದ ಮಹಿಳಾ ಟೆನಿಸ್ ತಾರೆಯಾದ ನವೊಮಿ ಒಸಾಕಾ ಅವರು ವಿಶ್ವದ ಅತಿ ಹೆಚ್ಚು ಸಂಭಾವನೆ ಪಡೆಯುವ ಮಹಿಳಾ ಕ್ರೀಡಾಪಟು ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಕಳೆದ 12 ತಿಂಗಳುಗಳಲ್ಲಿ ಅವರ ಒಟ್ಟು ₹ 284 ಕೋಟಿಗಿಂತ ಅಧಿಕ ಸಂಪಾದಿಸಿದ್ದಾರೆ ಎಂದು ಫೋರ್ಬ್ಸ್ ನಿಯತಕಾಲಿಕೆ ವರದಿ ಮಾಡಿದೆ.

*22ವರ್ಷದ ಒಸಾಕಾ ಅವರು ಅಮೆರಿಕದ ಸೆರೆನಾ ವಿಲಿಯಮ್ಸ್ (₹273 ಕೋಟಿ) ಅವರನ್ನು ಹಿಂದಿಕ್ಕಿ ಈ ಸ್ಥಾನ ಗಳಿಸಿದ್ದಾರೆ.

* ಅತಿ ಹೆಚ್ಚು ಸಂಭಾವನೆ ಪಡೆಯುವ ವಿಶ್ವದ ಅಗ್ರ 100 ಕ್ರೀಡಾಪಟುಗಳ ಪಟ್ಟಿಯಲ್ಲಿ ಒಸಾಕಾ 29ನೇ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ. ಸೆರೆನಾ ಅವರ ಸ್ಥಾನ 33ನೆಯದ್ದು.

# Current affairs of May 2020 from KPSC Vaani

*** 24 05 2020 ಪಿಪಿಇ ಕಿಟ್ ಗಳ ತಯಾರಿಕೆಯಲ್ಲಿ ವಿಶ್ವದಲ್ಲಿ ಎರಡನೇ ಅತಿದೊಡ್ಡ ಸ್ಥಾನ ಪಡೆದಭಾರತ**



ಭಾರತವು ವೈಯಕ್ತಿಕ ರಕ್ಷಣಾ ಸಾಧನಗಳನ್ನು(PPE Kit)ಗಳ ಉತ್ಪಾದಿಸುವ ಎರಡನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ. ಚೀನಾ ವಿಶ್ವದ ಪಿಪಿಇ ಉತ್ಪಾದನೆಯಲ್ಲಿ ಮೊದಲ ಸ್ಥಾನ ಪಡೆದಿದೆ.

* ಉತ್ಪಾದನೆಯ ಜೊತೆಗೆ ಪಿಪಿಇ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಕೇಂದ್ರ ಜವಳಿ ಸಚಿವಾಲಯ ಹಲವಾರು ಕ್ರಮಗಳನ್ನು ಕೈಗೊಂಡಿದೆ.

* ಗುಣಮಟ್ಟದ ಭಾರತವು ಪಿಪಿಇ ಉತ್ಪನ್ನಗಳನ್ನು ಹೆಚ್ಚಿಸುವಲ್ಲಿ ಹಲವಾರು ಸವಾಲುಗಳನ್ನು ಎದುರಿಸಿತು. ಚೀನಾದಿಂದ ಯಂತ್ರಗಳನ್ನು ಆಮದು ಮಾಡಿಕೊಳ್ಳುವುದು ಮತ್ತು ಬೆಲೆಗಳನ್ನು ಹೆಚ್ಚಿಸುವುದು ಇದರಲ್ಲಿ ಸೇರಿದೆ. ಇವುಗಳ ಹೊರತಾಗಿ, ಆಮದು ವಿಳಂಬ ಮತ್ತು ದೇಶೀಯ ತಯಾರಕರ ಲಭ್ಯತೆ ಇಲ್ಲ. ಜನವರಿ 2020 ರಲ್ಲಿ, ಭಾರತವು 2.75 ಲಕ್ಷ ಪಿಪಿಇ ಕಿಟ್‌ಗಳನ್ನು ಹೊಂದಿತ್ತು ಮತ್ತು ನಂತರದ ದಿನಗಳಲ್ಲಿ ಇವುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಪ್ರಸ್ತುತ ಭಾರತವು 15.96 ಲಕ್ಷ ಪಿಪಿಇ ಕಿಟ್‌ಗಳನ್ನು ಸ್ಟಾಕ್ ಬಫರ್ ಹೊಂದಿದೆ.

*** 25 05 2020 ಮೇ25 = ದಿಟ್ಟಕ್ರಾಂತಿಕಾರಿರಾಸ್‌ಬಿಹಾರಿಬೋಸ್‌ಜಯಂತಿ**



ಬಂಗಾಲ ಪ್ರಾಂತದ ಬರ್ಧಮಾನ್ ಜಿಲ್ಲೆಗೆ ಸೇರಿದ ಸುಬಲ್ ದಾಹ ಎಂಬ ಹಳ್ಳಿಯಲ್ಲಿ ರಾಸ್ ಬಿಹಾರಿ ಬೊಸ್ ಅವರು ಜನಿಸಿದರು. ತಂದೆ ವಿನೋದ್ ಬಿಹಾರಿ ಬೋಸ್ ಮತ್ತು ತಾಯಿ ಭುವನೇಶ್ವರಿ.

* ಭಾರತ ಸ್ವಾತಂತ್ರ್ಯ ದೊರಕಿಸಲು 'ಭಾರತ ರಾಷ್ಟ್ರೀಯ ಸೈನ್ಯ'ವನ್ನು ಕಟ್ಟಿದರು, ಮತ್ತು ಹಲವು ರಾಸಾಯನಿಕ ಉಪಯೋಗಿಸಿ ಬಾಂಬ್ ತಯಾರಿಸುವುದನ್ನು ಕರಗತ ಮಾಡಿಕೊಂಡಿದ್ದರು.

* 1924ರಲ್ಲಿ ಟೋಕಿಯೋ ನಗರದಲ್ಲಿ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಪ್ರಾರಂಭಿಸಿದರು. ಹಾಗು ಏಷ್ಯಾದ ದೇಶಗಳ ಸ್ವಾತಂತ್ರ್ಯಕ್ಕಾಗಿ 'ಫ್ರಾನ್ಸ್ ಏಷ್ಯಾ ಲೀಗ್'ನ್ನು ಆರಂಭಿಸಿದ್ದರು.

*ಬೋಸ್ 1945 ಜನವರಿ 24ರಂದು ಟೋಕಿಯೋ ನಗರದಲ್ಲಿ ಹೃದಯಾಘಾತದಿಂದ ವಿಧಿವಶರಾದರು.

# KSP PSI/PC ಹುದ್ದೆಗಳ ತಯಾರಿಗಾಗಿ ಉತ್ತಮ ಪುಸ್ತಕಗಳನ್ನು ಈಗಲೇ ಖರೀದಿಸಿ




## www.kpscvaani.com/books

* ಪ್ರತಿ ಪುಸ್ತಕದ ಮೇಲೆ ಉತ್ತಮ ರಿಯಾಯಿತಿ
* ಪ್ರಸಿದ್ಧ ಲೇಖಕರ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ

# Current affairs of May 2020 from KPSC Vaani

*** 25 05 2020 ಪೊಲೀಸ್ ಪೇದೆ ಪದ ಬಳಸದಂತೆ ಕರ್ನಾಟಕ ಪೊಲೀಸ್ ಇಲಾಖೆ ಮಹತ್ವದ ಆದೇಶ**



ಬೆಂಗಳೂರು : ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಇನ್ನುಮುಂದೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಪೊಲೀಸ್ ಪೇದೆಗಳಿಗೆ ಪೇದೆ ಬದಲಾಗಿ ಕಾನ್ಸ್ಟೇಬಲ್ ಎಂದು ಕರೆಯುವಂತೆ ಮಹತ್ವದ ಆದೇಶವೊಂದನ್ನು ಹೊರಡಿಸಿದೆ. ಇಲಾಖೆಯ ಶ್ರೇಣಿವಾರು ಹುದ್ದೆಯ ಹೆಸರಿನಲ್ಲಿ ಬದಲಾವಣೆ ಮಾಡಲಾಗಿದ್ದು, ಮುಂದೆ 'ಪೊಲೀಸ್ ಪೇದೆ' ಅನ್ನುವಂತಿಲ್ಲ ಬದಲಿಗೆ ಪೊಲೀಸ್ ಕಾನ್ಸ್ಟೇಬಲ್ ಎಂದು ಕರೆಯಬೇಕು.

* ಇನ್ನು ಮುಂದೆ ಪೇದೆಗಳನ್ನು ಕಾನ್ಸ್‌ಟೇಬಲ್, ಮುಖ್ಯ ಪೇದೆಯನ್ನು ಹೆಡ್ ಕಾನ್ಸ್‌ಟೇಬಲ್ ಎಂದು ಕರೆಯಬೇಕು. ಬರವಣಿಗೆಯಲ್ಲಿಯೂ ಸಹ ಇದೇ ಪದಗಳನ್ನು ಬಳಸಬೇಕು ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

* ರಾಜ್ಯದ ನಾಗರಿಕರಿಗೆ ಎಲ್ಲ ರೀತಿಯ ಸೇವೆಗಳನ್ನು ನೀಡುವ ಇವರಿಗೆ "ಪೇದೆ" ಎಂಬ ಪದದ ಉಪಯೋಗ ಅಷ್ಟು ಸಮಂಜಸವಾಗಿರುವುದಿಲ್ಲ ಆದ್ದರಿಂದ ಈ ಪದದ ಬಳಕೆ ಕೈಬಿಡಲು ಆದೇಶದಲ್ಲಿ ತಿಳಿಸಲಾಗಿದೆ.

*** 25 05 2020ಮೇ24 : ಕಾಮನ್ವೆಲ್ತ್ ದಿನ**





ಕಾಮನ್ವೆಲ್ತ್ ದಿನವು ಆಫ್ರಿಕಾ, ಏಷ್ಯಾ, ಕೆರಿಬಿಯನ್ ಮತ್ತು ಅಮೆರಿಕಾ, ಪೆಸಿಫಿಕ್ ಮತ್ತು ಯುರೋಪಿನ ರಾಷ್ಟ್ರಗಳ ಜನರು ಆಚರಿಸುವ ವಾರ್ಷಿಕ ಆಚರಣೆಯಾಗಿದೆ. ಕಾಮನ್ವೆಲ್ತ್ ದಿನದ ಇತಿಹಾಸ : 1916 ರ ನಂತರ ವಿಕ್ಟೋರಿಯಾ ರಾಣಿಯ ಜನನದ ಸಂಭ್ರಮಾಚರಣೆಯಾಗಿ ಕಾಮನ್‌ವೆಲ್ತ್ ದಿನವನ್ನು ಈ ಹಿಂದೆ ಎಂಪೈರ್ ಡೇ ಎಂದು ಆಚರಿಸಲಾಗುತ್ತಿತ್ತು. 1958 ರಲ್ಲಿ, ಯುನೈಟೆಡ್ ಕಿಂಗ್‌ಡಂನ ಅಂದಿನ ಪ್ರಧಾನ ಮಂತ್ರಿ ಹೆರಾಲ್ಡ್ ಮ್ಯಾಕ್‌ಮಿಲನ್ ಸಂಸತ್ತಿನಲ್ಲಿ ಸಾಮ್ರಾಜ್ಯದ ದಿನವನ್ನು ಕಾಮನ್‌ವೆಲ್ತ್ ದಿನ ಎಂದು ಮರುನಾಮಕರಣ ಮಾಡಿದರು. ಆಚರಣೆ : ಕಾಮನ್ವೆಲ್ತ್ ದಿನವನ್ನು ಪ್ರಪಂಚದಾದ್ಯಂತ ವಿವಿಧ ರಾಷ್ಟ್ರಗಳಲ್ಲಿ ವಿವಿಧ ದಿನಾಂಕದಂದು ಆಚರಿಸಲಾಗುತ್ತದೆ. UK, ಆಸ್ಟ್ರೇಲಿಯಾ ಮತ್ತು ಕೆನಡಾದಲ್ಲಿ ಮಾರ್ಚ್ ಎರಡನೇ ಸೋಮವಾರದಂದು ದಿನವನ್ನು ಆಚರಿಸಿದರೆ, ಮತ್ತೊಂದೆಡೆ, ಭಾರತ ಸೇರಿ ಹಲವು ದೇಶಗಳು ಮೇ 24 ರಂದು ಕಾಮನ್‌ವೆಲ್ತ್ ದಿನವನ್ನು ಆಚರಿಸುತ್ತವೆ.

*2020ರ ಕಾಮನ್ವೆಲ್ತ್ ದಿನದ ಘೋಷವಾಕ್ಯ : DeliveringaCommon Future

* 2019 ರ ಕಾಮನ್ವೆಲ್ತ್ ದಿನದ ಘೋಷವಾಕ್ಯ : A Connected Commonwealth

# Current affairs of May 2020 from KPSC Vaani

### * 26 05 2020 ಹಾಕಿಲೋಕದ ದಂತ ಕತೆ ಬಲ್ಬೀರ್‌ಸಿಂಗ್ ಇನ್ನಿಲ್ಲ



ಚಂಡೀಗಢ : ಸ್ವತಂತ್ರ ಭಾರತದ ಮೊಟ್ಟಮೊದಲ ಕ್ರೀಡಾತಾರೆ ಹಾಗೂ ಮೂರು ಒಲಿಂಪಿಕ್ಸ್ ಸ್ವರ್ಣ ಪದಕಗಳ ಒಡೆಯರಾದ ಹಾಕಿ ದಿಗ್ಗಜ ಬಲ್ಬೀರ್ ಸಿಂಗ್ ಸೀನಿಯರ್ ಅವರು ತಮ್ಮ 96 ನೇ ವಯಸ್ಸಿನಲ್ಲಿ ಆರೋಗ್ಯ ಸಮಸ್ಯೆಯಿಂದ ನಿಧನರಾದರು.

* 1923ರ ಡಿಸೆಂಬರ್ 31ರಂದು ಪಂಜಾಬ್‌ನ ಹರಿಪುರ ಖಲ್ಸಾ ಗ್ರಾಮದಲ್ಲಿ ಜನನ

* ಹಲವಾರು 'ಬಲ್ಬೀರ್ ಸಿಂಗ್' ಹೆಸರಿನ ಆಟಗಾರರು ಹಾಕಿಗೆ ಪ್ರವೇಶ ಪಡೆದ ಕಾರಣ ಅವರ ಹೆಸರಿಗೆ 'ಸೀನಿಯರ್' ಎಂಬ ವಿಶೇಷ ಪದ ಸೇರ್ಪಡೆಗೊಂಡಿತ್ತು.

* ಅವರ ಆತ್ಮಕತೆ 'ದಿ ಗೋಲ್ಡನ್ ಹ್ಯಾಟ್ರಿಕ್, ಮೈ ಹಾಕಿ ಡೇಸ್' 1977ರಲ್ಲಿ ಬಿಡುಗಡೆಯಾಗಿತ್ತು.

* ಕಳೆದ ವರ್ಷ ಪಂಜಾಬ್ ಸರ್ಕಾರದಿಂದ ಅವರಿಗೆ "ಮಹಾರಾಜಾ ರಂಜಿತ್ ಸಿಂಗ್" ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

* ಸ್ವಾತಂತ್ರ್ಯದ ಬಳಿಕ ಭಾರತ ತಂಡ ಆಡಿದ ಮೊಟ್ಟಮೊದಲ ಒಲಿಂಪಿಕ್ಸ್‌ನಲ್ಲಿ (1948) ಬಲ್ಬೀರ್ ಸ್ವರ್ಣ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು.

* ಬ್ರಿಟನ್ ವಿರುದ್ಧದ ಫೈನಲ್‌ನಲ್ಲಿ 4 0 ಗೆಲುವಿನ ವೇಳೆ 2 ಗೋಲು ಬಲ್ಬೀರ್ ಸ್ಟಿಕ್‌ನಿಂದಲೇ ಸಿಡಿದಿದ್ದವು.

* 1956ರ ಒಲಿಂಪಿಕ್ಸ್‌ನಲ್ಲಿ ಸ್ವರ್ಣ ಜಯಿಸಿದ ಭಾರತ ತಂಡಕ್ಕೆ ನಾಯಕರೂ ಆಗಿದ್ದರು. ಭಾರತ ಪರ 61 ಪಂದ್ಯಗಳಲ್ಲಿ 246 ಗೋಲು ಸಿಡಿಸಿದ್ದಾರೆ.

* ಒಲಿಂಪಿಕ್ಸ್ ಹಾಕಿ ಪಂದ್ಯದ ಫೈನಲ್‌ನಲ್ಲಿ ಗರಿಷ್ಠ ಗೋಲು ದಾಖಲಿಸಿದ ದಾಖಲೆ ಈಗಲೂ ಬಲ್ಬೀರ್ ಸಿಂಗ್ ಹೆಸರಿನಲ್ಲಿದೆ. 1952 ರಲ್ಲಿ ನೆದರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಭಾರತ ತಂಡದ 6 ಗೋಲುಗಳ ಪೈಕಿ 5 ಗೋಲುಗಳನ್ನೂ ಇವರೇ ಸಿಡಿಸಿದ್ದರು.

### * 27 05 2020 ಭಾರತ ಚೀನಾ ಬಿಕ್ಕಟ್ಟು : ರಕ್ಷಣಾ ಮುಖ್ಯಸ್ಥರೊಡನೆ ಪ್ರಧಾನಿ ಸಭೆ



ನವದೆಹಲಿ: ಭಾರತ ಚೀನಾ ರಾಷ್ಟ್ರಗಳ ಮಧ್ಯೆ ದ್ವೇಷಮಯ ಸ್ಥಿತಿ ಮುಂದುವರಿದಿದ್ದು, ಪ್ರಧಾನಿ ಮೋದಿಯವರು ಈ ಕುರಿತು ಚರ್ಚಿಸಲು ಎಲ್ಲ ಸೇನಾ ವಿಭಾಗಗಳ ಮುಖ್ಯಸ್ಥರುಗಳೊಡನೆ ಉನ್ನತ ಮಟ್ಟದ ಸಭೆ ನಡೆಸಿದರು. ಈ ಸಭೆಯಲ್ಲಿ ಭಾರತದ ರಕ್ಷಣಾ ಸಲಹೆಗಾರರಾದ ಅಜಿತ್ ದೋವಲ್, ಮೂರೂ ರಕ್ಷಣಾ ಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಕೂಡ ಭಾಗವಹಿಸಿದ್ದರು. ಚೀನಾವು ಸಂಭಾವ್ಯ ಗಡಿ ಉಲ್ಲಂಘನೆಯ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

# Current affairs of May 2020 from KPSC Vaani

*** 27 05 2020 ಭಾರತೀಯ ಶಾಂತಿಪಾಲಕ ಮಹಿಳಾ ಸೇನಾಧಿಕಾರಿಗೆ ವಿಶ್ವಸಂಸ್ಥೆಯ ಪ್ರತಿಷ್ಠಿತಪ್ರಶಸ್ತಿ**



ವಿಶ್ವಸಂಸ್ಥೆ (ನ್ಯೂಯಾರ್ಕ್) : ವಿಶ್ವಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಮಹಿಳಾ ಸೇನಾಧಿಕಾರಿಯಾದ ಮೇಜರ್ ಸುಮನ್ ಗವಾನಿ ಅವರು ಪ್ರತಿಷ್ಠಿತ ಯುನೈಟೆಡ್ ನೇಶನ್ಸ್ ಮಿಲಿಟರಿ ಜಂಡರ್ ಆಯಡ್ವಕೇಟ್ ಆಫ್ ದ ಈಯರ್ ಪ್ರಶಸ್ತಿ (2019)ಗಾಗಿ ಆಯ್ಕೆಯಾಗಿದ್ದಾರೆ. ಇವರ ಜೊತೆ ಬ್ರೆಝಿಲ್‌ನ ಓರ್ವ ಮಹಿಳಾ ಸೇನಾಧಿಕಾರಿಯಾದ ಕಮಾಂಡರ್ ಕಾರ್ಲಾ ಮೋಂಟೇರೊ ಡಿ ಕ್ಯಾಸ್ಟ್ರೊ ಅರಾವುಜೊ ಅವರು ಕೂಡ ಈ ಪ್ರಶಸ್ತಿಯನ್ನು ಪಡೆದಿದ್ದಾರೆ. ಈ ಇಬ್ಬರು ಸೇನಾಧಿಕಾರಿಗಳು ಇದೆ ಮೇ 29ರಂದು ಆನ್‌ಲೈನ್ ನಲ್ಲಿ ನಡೆಯಲಿರುವ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಸ್ವೀಕರಿಸಲಿದ್ದಾರೆ. ಈ ಸಮಾರಂಭದ ಅಧ್ಯಕ್ಷತೆಯನ್ನು ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರು ವಹಿಸಿಕೊಳ್ಳಲಿದ್ದಾರೆ.

* ಮೇ 29 ಅಂತರ್‌ರಾಷ್ಟ್ರೀಯ ವಿಶ್ವಸಂಸ್ಥೆಯ ಶಾಂತಿಪಾಲಕರ ದಿನವಾಗಿದೆ.

*** 27 05 2020 ಗದಗದಲ್ಲಿರುವ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯಕ್ಕೆ ಡಾ.ವಿಷ್ಣುಕಾಂತ ಎಸ್.ಚಟ್ಟಪಲ್ಲಿ ನೂತನಕುಲಪತಿ**



ಬೆಂಗಳೂರು: ಗದಗದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ನೂತನ ಕುಲಪತಿಗಳನ್ನಾಗಿ ಡಾ.ವಿಷ್ಣುಕಾಂತ ಎಸ್ .ಚಟ್ಟಪಲ್ಲಿ ಅವರನ್ನು ರಾಜ್ಯಪಾಲರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಇವರು ಇಲ್ಲಿಯವರೆಗೆ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ MBA ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಹುದ್ದೆಯಲ್ಲಿ ಈ ಮೊದಲು ಪ್ರೊ.ಬಿ.ತಿಮ್ಮೇಗೌಡ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದರು. ಬಳಿಕೆ ಅವರು 2019ರ ಆಗಸ್ಟ್ 7ರಂದು ನಿವೃತ್ತರಾಗಿದ್ದರು. ನಂತರ ಈ ಹುದ್ದೆಯಲ್ಲಿ ಡಾ.ಸುರೇಶ್ ವಿ.ನಾಡಗೌಡರ್ ಅವರು ಹಂಗಾಮಿ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.


# Current affairs of May 2020 from KPSC Vaani

*** 28 05 2020 ವಾಯುಪಡೆ ಸೇರಿದ ಸ್ವದೇಶಿ ನಿರ್ಮಿತ ತೇಜಸ್ ಯುದ್ಧ ವಿಮಾನದ ಎರಡನೇ ಸ್ಕ್ವಾಡ್ರನ್**



ಸ್ವದೇಶಿ ನಿರ್ಮಿತ ತೇಜಸ್ ಯುದ್ಧ ವಿಮಾನದ ಎರಡನೇ ಸ್ಕ್ವಾಡ್ರನ್ ಬುಧವಾರ ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆಗೊಂಡಿದೆ. ಮತ್ತೆ ಪುನಾರಂಭವಾದ ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ವಾಯುನೆಲೆಯಲ್ಲಿ ವಾಯುಪಡೆ ಮುಖ್ಯಸ್ಥ ಆರ್.ಕೆ. ಎಸ್ ಭದೌರಿಯಾ ಅವರು ತೇಜಸ್ ಯುದ್ಧ ವಿಮಾನಗಳನ್ನು ಚಲಾಯಿಸುವುದರ ಮೂಲಕ ಸೇವೆಗೆ ಚಾಲನೆ ನೀಡಿದರು. ಈ ಯುದ್ಧ ವಿಮಾನಗಳ ವಿನ್ಯಾಸವನ್ನು ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ) ರೂಪಿಸಿದ್ದು, ಬೆಂಗಳೂರು ಮೂಲದ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ನಲ್ಲಿ ತಯಾರಿಸಲಾಗಿದೆ. ಎಲ್‌ಸಿಎ ತೇಜಸ್ ವಿಶೇಷತೆ : – ಸಿಂಗಲ್ ಎಂಜಿನ್, ಡೆಲ್ಟಾ ವಿಂಗ್, 4ನೇ ತಲೆಮಾರಿನ ಫೈಟರ್ ಜೆಟ್ – 6,560 ಕಿಲೋ ತೂಕ – 15ಕಿ.ಮೀ. ಎತ್ತರದವರೆಗೆ ಹಾರಾಟ – 13.2 ಮೀಟರ್ ಉದ್ದ – 8.20ಮೀಟರ್ ರೆಕ್ಕೆಯ ಉದ್ದ

*** 28 05 2020 ಅಲ್ಜೇರಿಯಾದ ಸಹಾರನ್ ಚಿರತೆ**




ಕಳೆದ ಒಂದು ದಶಕದಲ್ಲಿ ಮೊದಲ ಬಾರಿಗೆ, ಪರಿಸರವಾದಿಗಳು ಅಲ್ಜೇರಿಯಾದ ಹೊಗ್ಗರ್ ಪರ್ವತಗಳ ರಾಷ್ಟ್ರೀಯ ಉದ್ಯಾನವನದಲ್ಲಿ ಸಹಾರನ್ ಚಿರತೆಯನ್ನು ಚಿತ್ರೀಕರಿಸಿದ್ದಾರೆ. ಸಹಾರನ್ ಚಿರತೆ ಕುರಿತು : ಸಹಾರನ್ ಚಿರತೆ (ಝೋಯೋಲೋಜಿಕಲ್ ಹೆಸರು: ಅಸಿನೋನಿಕ್ಸ್ ಜುಬಾಟಸ್ ಹೆಕ್ಕಿ) ಅಥವಾ ವಾಯುವ್ಯ ಆಫ್ರಿಕಾದ ಚಿರತೆ ಎಂಬುದು ಚಿರತೆಯ ಒಂದು ಉಪಜಾತಿಯಾಗಿದೆ. ಸಹಾರಾ ಮತ್ತು ಆಫ್ರಿಕಾದ ಸಹೇಲ್ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಇವುಗಳು ಕಂಡುಬರುತ್ತವೆಯಾದರು, ಪ್ರಸ್ತುತ ಈ ಜೀವಿಗಳು ಅಳಿವಿನಂಚಿನಲ್ಲಿರುವ ಪ್ರಾಣಿಯಾಗಿದ್ದು, 2008 ರಲ್ಲಿ ಇವುಗಳ ಒಟ್ಟು ಸಂಖ್ಯೆಯು 250ಕ್ಕಿಂತಕಡಿಮೆಎಂದುಅಂದಾಜಿಸಲಾಗಿತ್ತು.

*ಇವುಗಳಪ್ರಮುಖವಾಗಿಅಲ್ಜೀರಿಯಾ,ಚಾಡ್, ಮಾಲಿ,ಬೆನಿನ್,ಬುರ್ಕಿನಾಫಾಸೊ ಮತ್ತುನೈಜರ್‌ದೇಶಗಳಕಾಡಿನಲ್ಲಿಕಂಡುಬರುತ್ತವೆ.

## Current affairs of May 2020 from KPSC Vaani



# Current affairs of May 2020 from KPSC Vaani

*** 28 05 2020 ಚಾರ್ ಧಾಮ್ ಹೆದ್ದಾರಿ ಅಭಿವೃದ್ಧಿ ಯೋಜನೆ: ಚಂಬಾ ಸುರಂಗ ಉದ್ಘಾಟನೆ**



ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಚಾರ್ ಧಾಮ್ ಹೆದ್ದಾರಿ ಅಭಿವೃದ್ಧಿ ಯೋಜನೆಯಾ ಚಂಬಾ ಸುರಂಗದ ಉದ್ಘಾಟಿಸಿದರು. ಚಾರ್ಧಮ್ ಪರಿಯೋಜನೆ : ಚಾರ್ ಧಾಮ್ ಮಾರ್ಗ ವಿಕಾಸ್ ಪರಿಯೋಜನ (ಚಾರ್ ಧಾಮ್ ಹೆದ್ದಾರಿ ಅಭಿವೃದ್ಧಿ ಯೋಜನೆ) ಗೆ ಡಿಸೆಂಬರ್ 27, 2016 ರಂದು ಪ್ರಧಾನಿ ನರೇದ್ರ ಮೋದಿಯವರು ಅಡಿಪಾಯ ಹಾಕಿದರು. ಈ ಯೋಜನೆಯು ಎರಡು ಪಥಗಳ ರಾಷ್ಟ್ರೀಯ ಹೆದ್ದಾರಿಯನ್ನು ಉತ್ತರಾಖಂಡದಲ್ಲಿ ನಿರ್ಮಾಣ ಮಾಡುವ ಗುರಿಹೊಂದಿದ್ದು, ಒಟ್ಟು 12000 ಕೋಟಿ ಮೊತ್ತದ ಯೋಜನೆಯಾಗಿದೆ.

* ಚಾರ್ ಧಾಮ್ ಮಾರ್ಗ : ರಿಷಿಕೇಶದಿಂದ ಆರಂಭವಾಗುವ ಚಾರ್ ಧಾಮ್ ಹೆದ್ದಾರಿ ಜಾಲವು ಉತ್ತರಾಖಂಡದ ಬದ್ರಿನಾಥ್, ಕೇದಾರನಾಥ, ಗಂಗೋತ್ರಿ ಮತ್ತು ಯಮುನೋತ್ರಿ ಈ ನಾಲ್ಕು ಪವಿತ್ರ ಸ್ಥಳಗಳನ್ನು ಸಂಪರ್ಕಿಸುತ್ತದೆ.

*** 28 05 2020 ವಿಯೆಟ್ನಾಂನಲ್ಲಿಒಂಬತ್ತನೇಶತಮಾನದಶಿವಲಿಂಗಪತ್ತೆ**



ಹನೋಯಿ: ವಿಯೆಟ್ನಾಂನಲ್ಲಿರುವ ಮೈಸನ್ ಪ್ರದೇಶದಲ್ಲಿ ಭಾರತೀಯ ಪುರಾತತ್ತ್ವ ಇಲಾಖೆಯು ನಡೆಸಿದ ಉತ್ಖನನದ ವೇಳೆಯಲ್ಲಿ ಸುಮಾರು 9ನೇ ಶತಮಾನದಷ್ಟು ಹಳೆಯದಾದ ಬೃಹತ್ ಏಕಶಿಲಾ ಶಿವಲಿಂಗವನ್ನು ಪತ್ತೆ ಹಚ್ಚಿದೆ. ಮೈಸನ್‌ನಲ್ಲಿ ಪ್ರಾಚೀನ ಸಂಸ್ಕೃತಿ ಸಂರಕ್ಷಣಾ ಯೋಜನೆಗಳನ್ನು ಕೈಗೊಳ್ಳಲಾಗಿದ್ದು, ಇದೆ ವೇಳೆ ನಡೆಸಿದ ಉತ್ಖನನದಲ್ಲಿ ಪ್ರಾಚೀನ ಶಿವಲಿಂಗ ಪತ್ತೆಯಾಗಿದೆ. ಮೈಸನ್ ಮಧ್ಯ ವಿಯೆಟ್ನಾಂನಲ್ಲಿನ ಭಾಗಶಃ ಹಾಳಾದ ಹಿಂದು ದೇವಾಲಯಗಳ ಸಮೂಹವಾಗಿದ್ದು, ಯುನೆಸ್ಕೋ ಇದನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಗುರುತಿಸಿದೆ.

# Current affairs of May 2020 from KPSC Vaani

*** 29 05 2020 ನಬಾರ್ಡ್ ನೂತನ ಅಧ್ಯಕ್ಷರಾಗಿ ಜಿ.ಆರ್.ಚಿಂತಲ ಅಧಿಕಾರ ಸ್ವೀಕಾರ**




ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್)ನ ನೂತನ ಅಧ್ಯಕ್ಷರಾಗಿ ಜಿ.ಆರ್.ಚಿಂತಲ ಅವರು ಅಧಿಕಾರ ವಹಿಸಿಕೊಂಡರು. ಬೆಂಗಳೂರಿನಲ್ಲಿರುವ ನಬಾರ್ಡ್‌ನ ಕೇಂದ್ರ ಕಚೇರಿಯಲ್ಲಿ ಇದೆ ದಿನಾಂಕ ಮೇ 27 ರಿಂದ ಅನ್ವಯವಾಗುವಂತೆ ಇವರ ಆಡಳಿತ ಆರಂಭವಾಗುತ್ತದೆ. ನಬಾರ್ಡ್‌ನ ಅಂಗಸಂಸ್ಥೆಯಾಗಿರುವ ಎನ್‌ಎಬಿಎಫ್‌ಐಎನ್‌ಎಸ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಇದುವರೆಗೆ ಇವರು ಕಾರ್ಯನಿರ್ವಹಿಸುತ್ತಿದ್ದರು.

*** 29 05 2020 ಇ ಪ್ಯಾನ್‌ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಿಂದ ಚಾಲನೆ**




ನವದೆಹಲಿ: ಆಧಾರ್ ಕಾರ್ಡನಲ್ಲಿರುವ ಮಾಹಿತಿ ನೀಡಿ ಆನ್‌ಲೈನ್ ಮೂಲಕ ತಕ್ಷಣವೇ ಉಚಿತವಾಗಿ ಮತ್ತು ಶಾಶ್ವತ ಖಾತೆ ಸಂಖ್ಯೆ (ಪರ್ಮನೆಂಟ್ ಅಕೌಂಟ್ ನಂಬರ್(PAN)) ಪಡೆಯುವ ನೂತನ ಸೇವೆಗೆ ಕೇಂದ್ರ ಸರ್ಕಾರದ ಹಣಕಾಸು ಸಚಿವೆಯಾದ ನಿರ್ಮಲಾ ಸೀತಾರಾಮನ್ ಅವರು ಚಾಲನೆ ನೀಡಿದರು. ಪ್ಯಾನ್ ಕಾರ್ಡ್ ನೀಡುವ ಪ್ರಕ್ರಿಯೆಯನ್ನು ಮತ್ತಷ್ಟು ಸುಲಭಗೊಳಿಸುವ ಕುರಿತು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಪ್ರಸ್ತುತ ಇರುವ ಪ್ರಕ್ರಿಯೆಯಾದ ಅರ್ಜಿ ನಮೂನೆಯಲ್ಲಿ ವಿಸ್ತೃತ ಮಾಹಿತಿ ತುಂಬಿ ಅದನ್ನು ಇಲಾಖೆಗೆ ಸಲ್ಲಿಸುವ ಸಮಸ್ಯೆ ತಪ್ಪಲಿದೆ. ಜೊತೆಗೆ ತೆರಿಗೆ ಇಲಾಖೆಯು ತೆರಿಗೆ ಪಾವತಿದಾರರ ಮನೆ ವಿಳಾಸಕ್ಕೆ ಪ್ಯಾನ್ ತಲುಪಿಸುವ ಸಮಸ್ಯೆ ಕೂಡ ಇರುವದಿಲ್ಲ.

# Current affairs of May 2020 from KPSC Vaani

*** 29 05 2020 ಕರ್ನಾಟಕ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡಿಯಾಗೆ ದಂಡ ವಿಧಿಸಿದ RBI**




ಅನುತ್ಪಾದಕ ಸಂಪತ್ತು ಅಥವಾ ಆಸ್ತಿಗಳಲ್ಲಿನ ಖಾತೆಗಳ ಮುಂಗಡ ಭಿನ್ನತೆಗೆ ಸಂಬಂಧಿಸಿದ ಆದಾಯ ಗುರುತಿಸುವಿಕೆ, ಆಸ್ತಿ ವರ್ಗೀಕರಣ ಮತ್ತು ಒದಗಿಸುವಿಕೆ, ವಂಚನೆಗಳನ್ನು ಪತ್ತೆಹಚ್ಚಿ ತಿಳಿಸುವುದು ಮತ್ತು ವರ್ಗೀಕರಿಸುವುದು, ಗ್ರಾಹಕರ ಖಾತೆ ತೆರೆಯುವಿಕೆಯಲ್ಲಿ ಶಿಸ್ತಿನ ಪಾಲನೆಯಲ್ಲಿ ತಪ್ಪುಗಳಿಗೆ ಸಂಬಂಧಿಸಿದಂತೆ RBI ನ ನಿಯಮಗಳನ್ನು ಪಾಲಿಸುವಲ್ಲಿ ವಿಫಲವಾದ ಬ್ಯಾಂಕ್ ಆಫ್ ಇಂಡಿಯಾಗೆ RBI 5 ಕೋಟಿ ವಿತ್ತೀಯ ದಂಡ ವಿಧಿಸಿದೆ, ಮತ್ತೊಂದು ಪ್ರಕರಣದಲ್ಲಿ ಇದೇ ರೀತಿ ಆದೇಶ, ನಿಯಮವನ್ನು ಪಾಲಿಸದ ಕರ್ನಾಟಕ ಬ್ಯಾಂಕ್ ಗೂ ಕೂಡ ಆರ್ಬಿಐ 1.20 ಕೋಟಿ ರೂಪಾಯಿ ದಂಡ ವಿಧಿಸಿದೆ.

*** 30 05 2020 ಛತ್ತೀಸ್ ಗಢದ ಮೊದಲ ಮುಖ್ಯಮಂತ್ರಿ ಅಜಿತ್ ಜೋಗಿ ಇನ್ನಿಲ್ಲ**



ರಾಯಪುರ್ : ಅನಾರೋಗ್ಯದಿಂದ ಬಳಲುತ್ತಿದ್ದ ಛತ್ತೀಸ್ ಗಢದ ಮೊದಲ ಮುಖ್ಯಮಂತ್ರಿ ಅಜಿತ್ ಜೋಗಿ ಅವರು ರಾಯಪುರದ ಖಾಸಗಿ ಆಸ್ಪತ್ರೆಯಲ್ಲಿ ತಮ್ಮ 74 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಒಬ್ಬ ಅಧಿಕಾರಿಯಾಗಿದ್ದ ಅಜಿತ್ ಜೋಗಿ ಅವರು ಬಳಿಕ ರಾಜಕಾರಣಿಯಾಗಿ ಛತ್ತೀಸ್ ಗಢ ಅಸ್ತಿತ್ವಕ್ಕೆ ಬಂದ ಬಳಿಕ ನವೆಂಬರ್ 2000 ರಿಂದ 2003 ರ ನವೆಂಬರ್ ವರೆಗೆ ಒಟ್ಟು 3 ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರದ ಮೊದಲ ಮುಖ್ಯಮಂತ್ರಿಯಾಗಿ ಇವರು ತಮ್ಮ ಸೇವೆ ಸಲ್ಲಿಸಿದ್ದರು.

## Current affairs of May 2020 from KPSC Vaani



# Current affairs of May 2020 from KPSC Vaani

*** 30 05 2020 ವಿಶ್ವ ಆರೋಗ್ಯ ಸಂಸ್ಥೆಯೊಂದಿಗಿನ ಸಂಬಂಧ ಕೊನೆಗಳಿಸಿದ ಅಮೆರಿಕ**




ವಾಷಿಂಗ್ಟನ್: ಜಾಗತಿಕವಾಗಿ ವ್ಯಾಪಿಸಿ ಅಪಾರ ನಷ್ಟ ಉಂಟು ಮಾಡಿರುವ ಕೊರೊನಾ ವೈರಸ್‌ನ ಹರಡುವಿಕೆಯನ್ನು ಆರಂಭದಲ್ಲೇ ತಡೆಯಲು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ವಿಫಲವಾಗಿದೆ ಎಂದು ಅಮೆರಿಕಾವು ಆರೋಪಿಸುತ್ತ ಬಂದಿತ್ತು ಮತ್ತು ತಾನು ನೀಡುತ್ತಿರುವ ಅನುದಾನವನ್ನು ಕಡಿತಗೊಳಿಸಿತ್ತು, ಈ ಹಿನ್ನಲೆ ಪ್ರಸ್ತುತ ವಿಶ್ವ ಅರೋಗ್ಯ ಸಂಸ್ಥೆಯೊಂದಿಗಿನ ಎಲ್ಲ ಸಂಬಂಧವನ್ನು ಕಡಿತಗೊಳಿಸುತ್ತಿರುವದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. 'ವಿಶ್ವ ಅರೋಗ್ಯ ಸಂಸ್ಥೆಯು ಚೀನಾದ ಪರವಾಗಿದ್ದು, ಹೀಗಾಗಿ ನಾವು ಅದರೊಂದಿಗಿನನಮ್ಮಸಂಬಂಧವನ್ನು ಕೊನೆಗೊಳಿಸುತ್ತಿದ್ದೇವೆ,'ಎಂದು ಟ್ರಂಪ್ ಸುದ್ದಿಗಾರರಿಗೆ ತಿಳಿಸಿದರು.

*** 30 05 2020 ವಿಪ್ರೊ ಕಂಪನಿಯ ನೂತನ CEO ಆಗಿ ಥಿಯೆರ್ರಿ ಡೆಲಾಪೋರ್ಟ್ ನೇಮಕ**




ಭಾರತದ ಪ್ರಮುಖ ಐಟಿ ತಂತ್ರಜ್ಞಾನ ಸಂಸ್ಥೆಗಳಲ್ಲಿ ಒಂದಾಗಿರುವ ವಿಪ್ರೊ ಸಂಸ್ಥೆಯು ಥಿಯೆರ್ರಿ ಡೆಲಾಪೋರ್ಟ್ ಅವರನ್ನು ತನ್ನ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಿದೆ. ಈ ಮೂಲಕ ವಿಪ್ರೋ ಸಂಸ್ಥೆಯು ಮೊದಲ ಬಾರಿ ಭಾರತೀಯೇತರ CEO ಯನ್ನು ನೇಮಿಸಿದಂತಾಗಿದೆ. ಥಿಯೆರ್ರಿ ಡೆಲಾಪೋರ್ಟ್ ಅವರು ಈ ಮೊದಲು ಕ್ಯಾಪಜೆಮಿನಿ ಸಂಸ್ಥೆಯಲ್ಲಿ 25 ವರ್ಷಗಳಿಂದ ಸೇವೆಯಲ್ಲಿಯಲ್ಲಿದ್ದರು.ಇವರುಜುಲೈ6ರಂದುವಿಪ್ರೊದಲ್ಲಿಅಧಿಕಾರಸ್ವೀಕರಿಸಲಿದ್ದಾರೆ.

# Current affairs of May 2020 from KPSC Vaani

*** 30 05 2020 ಉತ್ತಮ ಕೌಶಲ್ಯವಿರುವ ಕಾರ್ಮಿಕರಿಗಾಗಿ ಮಧ್ಯಪ್ರದೇಶ ಸರ್ಕಾರದಿಂದ ರೋಜಗಾರ ಸೇತು ಯೋಜನೆ ಆರಂಭ**

ಮಧ್ಯಪ್ರದೇಶ ಸರ್ಕಾರವು ವಲಸೆ ಕಾರ್ಮಿಕರಿಗೆ ಸಹಾಯ ಮಾಡಲು ರೋಜರ್ ಸೇತು ಯೋಜನೆಯನ್ನು ಆರಂಭಿಸಿದೆ. ಈ ಯೋಜನೆಯು ವಲಸೆ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವ ಉದ್ದೇಶ ಹೊಂದಿದೆ. ರೋಜಗಾರ ಸೇತು ಯೋಜನೆ : ರೋಜಗಾರ ಸೇತು ಯೋಜನೆಯು ತಮ್ಮ ಮನೆಗಳಿಗೆ ಮರಳಿದ ವಲಸೆ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುತ್ತದೆ. ಹಾಗೂ ರಾಜ್ಯದ ಜನಸಂಖ್ಯೆಯ ಬಗ್ಗೆ ಸಂಪೂರ್ಣ ಸಮೀಕ್ಷೆ ನಡೆಸುವುದು ಈ ಯೋಜನೆಯಾ ಮುಖ್ಯ ಉದ್ದೇಶವಾಗಿದೆ.

*** 31 05 2020 ಫೋಬ್ಸ್ ವರದಿ: ವಿಶ್ವದ ಶ್ರೀಮಂತ ಕ್ರೀಡಾಪಟುಗಳಲ್ಲಿ ಸ್ಥಾನ ಪಡೆದ ಏಕೈಕ ಭಾರತೀಯ ಕೊಹ್ಲಿ**



ನವದೆಹಲಿ: ಫೋಬ್ಸ್ ನಿಯತಕಾಲಿಕ ವಿಶ್ವದ ಅತ್ಯಂತ ಶ್ರೀಮಂತ ನೂರು ಕ್ರೀಡಾಪಟುಗಳ ಪಟ್ಟಿಯನ್ನು ಪ್ರಕಟಿಸಿದೆ. ಈ ನೂರು ಆಟಗಾರರ ಪಟ್ಟಿಯಲ್ಲಿ ಭಾರತದಿಂದ ಸ್ಥಾನ ಪಡೆದ ಏಕೈಕ ಕ್ರೀಡಾಪಟುವಾಗಿ ವಿರಾಟ ಕೊಹ್ಲಿ ಹೊರಹೊಮ್ಮಿದ್ದಾರೆ. ಭಾರತೀಯ ಕ್ರಿಕೆಟ್ ತಂಡದ ನಾಯಕನಾಗಿರುವ ಕೊಹ್ಲಿಯವರು ಕಳೆದ ಒಂದು ವರ್ಷದಲ್ಲಿ ಗಳಿಸಿರುವ ಆದಾಯ ಸುಮಾರು 26 ಮಿಲಿಯನ್ ಡಾಲರ್ (ಅಂದಾಜು 196 ಕೋಟಿ ರೂ.) ಆಗಿದ್ದು, ಇದರಲ್ಲಿ 24 ಮಿಲಿಯನ್ ಗಳಿಕೆಯನ್ನು ಜಾಹೀರಾತುಗಳ ಮೂಲಕ ಮತ್ತು 2 ಮಿಲಿಯನ್ ಡಾಲರ್ ಹಣವನ್ನು ಸಂಬಳ ಹಾಗೂ ಪ್ರಶಸ್ತಿ ಮೊತ್ತವಾಗಿದೆ ಎಂದು ಫೋಬ್ಸ್ ತಿಳಿಸಿದೆ. ಕಳೆದ ವರ್ಷದೊಂದಿಗೆ ಹೋಲಿಸಿದರೆ ವಿರಾಟ್ ಕೊಹ್ಲಿ ಸ್ಥಾನದಲ್ಲಿ ಭಾರಿ ಏರಿಕೆ ಕಂಡಿದ್ದು, 30 ಸ್ಥಾನ ಬಡ್ತಿಪಡೆದು 66ನೇ ಸ್ಥಾನದಲ್ಲಿದ್ದಾರೆ. ಹಾಗೂ ಈ ಪಟ್ಟಿಯಲ್ಲಿ ಸ್ಥಾನ ಪಡೆದ ಏಕೈಕ ಕ್ರಿಕೆಟಿಗ ಇವರಾಗಿದ್ದಾರೆ.

* ಮೊದಲ ಬಾರಿಗೆ ಟೆನಿಸ್ ಆಟಗಾರ ರೋಜರ್ ಫೆಡರರ್ 802 ಕೋಟಿ ರೂ. ಆದಾಯದೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ.

* 793 ಕೋಟಿ ರೂ.ಗಳೊಂದಿಗೆ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೋ ರೊನಾಲ್ಡೊ ಎರಡನೇ ಸ್ಥಾನಕ್ಕೆ ಇಳಿದಿದ್ದಾರೆ.

* ಲಿಯೊನೆಲ್ ಮೆಸ್ಸಿ 785 ಕೋಟಿ ರೂ.ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

* ಬ್ರೆಜಿಲ್‌ನ ನೇಮಾರ್ 721 ಕೋಟಿ ರೂ. ಒಡೆಯರಾಗಿ ನಾಲ್ಕನೇ ಸ್ಥಾನ ಪಡೆದುಕೊಂಡಿದ್ದಾರೆ.

# Current affairs of May 2020 from KPSC Vaani

*** 31 05 2020 ವಿಶ್ವಸಂಸ್ಥೆ ಭದ್ರತಾ ಮಂಡಳಿ ಕಾಯಂ ಅಲ್ಲದ ಐದು ಸ್ಥಾನಗಳ ಸದಸ್ಯತ್ವಕ್ಕೆ ಚುನಾವಣೆ:ಭಾರತಕ್ಕೆ ಭರವಸೆ**



ವಿಶ್ವಸಂಸ್ಥೆ: ಕೋವಿಡ್ 19 lockdown ಹಾಗೂ ಹರಡುವಿಕೆಯನ್ನು ತಡೆಯಲು ನೂತನ ಮತದಾನ ವ್ಯವಸ್ಥೆಯಡಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಅಲ್ಲದ ಐದು ಸ್ಥಾನಗಳಿಗೆ ಬರುವ ತಿಂಗಳು ಚುನಾವಣೆ ನಡೆಯಲಿದೆ. ಹಾಗೂ ಈ ಚುನಾವಣೆಯಲ್ಲಿ ಭಾರತಕ್ಕೆ ಗೆಲುವು ಬಹುತೇಕ ನಿಚ್ಚಳವಾಗಿದೆ. 193 ಸದಸ್ಯರ ಸಾಮಾನ್ಯ ಸಭೆಯು 'ಕೋವಿಡ್ 19 ಸಮಯದಲ್ಲಿ ಸಮಗ್ರ ಸಭೆಯಾ ಹೊರತಾಗಿ ರಹಸ್ಯ ಮತದಾನದ ಮೂಲಕ ಚುನವಣೆ ನಡೆಸುವ ವಿಧಾನ' ಅಂಗೀಕರಿಸಿತು. 2021- 22ರ ಸಾಲಿನ 15 ರಾಷ್ಟ್ರಗಳ ಮಂಡಳಿಗೆ 5 ಕಾಯಂ ಸದಸ್ಯರ ಚುನಾವಣೆಯನ್ನು ಜೂನ್ 17ಕ್ಕೆ ನಿಗದಿಪಡಿಸಲಾಗಿದ್ದು.

* ಏಷ್ಯಾ ಫೆಸಿಫಿಕ್‌ನಿಂದ ಸ್ಪರ್ಧಿಸುತ್ತಿರುವ ಏಕೈಕ ರಾಷ್ಟ್ರ ಭಾರತವಾಗಿದ್ದು, ಗೆಲುವು ಖಚಿತವಾಗಿದೆ.

*** 31 05 2020 BCCI ನಿಂದ 'ಖೇಲ್ ರತ್ನ' ಕ್ಕೆ ರೋಹಿತ್ ಶರ್ಮಾ ಮತ್ತು 'ಅರ್ಜುನ'ಕ್ಕೆ ಧವನ್ ಹೆಸರು ನಾಮನಿರ್ದೇಶನ**




ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯಾವು (BCCI) ಭಾರತ ಕ್ರಿಕೆಟ್ ತಂಡದ ಹಿಟ್‌ಮ್ಯಾನ್ ಎಂದೇ ಖ್ಯಾತರಾಗಿರುವ ರೋಹಿತ್ ಶರ್ಮಾ ಅವರ ಹೆಸರನ್ನು ರಾಜೀವ್ ಗಾಂಧಿ ಖೇಲ್ ರತ್ನ 2020 ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದೆ. ಜೊತೆಗೆ ಶಿಖರ್ ಧವನ್, ಇಶಾಂತ್ ಶರ್ಮಾ ಮತ್ತು ದೀಪ್ತೀ ಶರ್ಮಾ ಹೆಸರುಗಳು ಅರ್ಜುನಾ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿವೆ. ಜನವರಿ 1ರಿಂದ ಡಿಸೆಂಬರ್ 2019ರ ವರೆಗಿನ ಕಾಲಾವಧಿಯ ಸಾಧನೆ ಪರಿಗಣಿ ಭಾರತ ಸರ್ಕಾರದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ 2020ರ ವರ್ಷಕ್ಕೆ ಬೇರೆ ಬೇರೆ ಪ್ರಶಸ್ತಿಗಳಿಗೆ ಹೆಸರುಗಳನ್ನು ಆಹ್ವಾನಿಸಿತ್ತು. ಅದರಂತೆ ಬಿಸಿಸಿಐ ಈ ಕ್ರಿಕೆಟಿಗರ ಹೆಸರುಗಳನ್ನು ನಾಮನಿರ್ದೇಶನಗೊಳಿಸಿದೆ.

# Current affairs of May 2020 from KPSC Vaani

*** 31 05 2020 ಅಗ್ಗದ ದರದ ವೆಂಟಿಲೇಟರ್ ಗಳ ಅಭಿವೃದ್ಧಿಗೆ 3 ಭಾರತೀಯ ಕಂಪನಿಗಳ ಆಯ್ಕೆ ಮಾಡಿದ ನಾಸಾ**



ವಾಷಿಂಗ್ ಟನ್: ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾವು ಕಡಿಮೆ ಬೆಲೆಯ ವೆಂಟಿಲೇಟರಗಳ ಅಭಿವೃದಿ ಪಡಿಸಲು ಒಟ್ಟು 3 ಭಾರತೀಯ ಕಂಪನಿಗಳನ್ನ ಆಯ್ಕೆ ಮಾಡಿದೆ. ಈ ಕಂಪನಿಗಳು ಕೋವಿಡ್ 19 ಸೋಂಕಿತರಿಗಾಗಿ ಅಗ್ಗದ ದರದ ವೆಂಟಿಲೇಟರ್ ಗಳ ತಯಾರಿ ಮಾಡಿಕೊಡಲಿವೆ. ಆಲ್ಫಾ ಡಿಸೈನ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್, ಭಾರತ್ ಫೋರ್ಜ್ ಲಿಮಿಟೆಡ್, ಮೇಧಾ ಸರ್ವೋ ಡ್ರೈವ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಗಳನ್ನು ಅಗ್ಗದ ದರದಲ್ಲಿ ವೆಂಟಿಲೇಟರ್ ಅಭಿವೃದ್ಧಿ ಪಡಿಸಲು ನಾಸಾ ಆಯ್ಕೆ ಮಾಡಿದ ಭಾರತೀಯ ಕಂಪನಿಗಳಾಗಿವೆ. ಈ ಕಂಪನಿಗಳು ತಯಾರಿಸಲಿರುವ ಅಗ್ಗದ ವೆಂಟಿಲೇಟರ್ ಗಳ ಮೂಲಮಾದರಿಯನ್ನು ನಾಸಾದ ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿ ತಂತ್ರಜ್ಞರು 37 ದಿನಗಳ ಅವಧಿಯಲ್ಲಿ ಸಿದ್ಧಪಡಿಸಿದ್ದಾರೆ.

# KPSC VAANI

Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ

ಸೇವೆಗಳು:

- ಪ್ರತಿದಿನದ ಉದ್ಯೋಗ ಮಾಹಿತಿ
- ಪ್ರತಿದಿನದ ಪ್ರಚಲಿತ ಘಟನೆಗಳು
- ಸ್ಟಡಿ ಮೆಟೀರಿಯಲ್ಸ್
- ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
- ಕಟ್ ಆಫ್ ಅಂಕಗಳ ಮಾಹಿತಿ
- ಸ್ಪರ್ಧಾತ್ಮಕ ಲೇಖನಗಳು
- ವೀಡಿಯೊ ತರಗತಿಗಳು
- ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ

**www.kpscvaani.com**

Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ



Scan QR Code to download kpscvaani App

